ಜನಮನದ ದನಿ

ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

ಮ್ಯಾಂಚೆಸ್ಟರ್ ಶನಿವಾರ ಇಂಗ್ಲೆಂಡ್ ವಿರುದ್ಧ ನಡೆದ 2ನೇ ಟಿ-20 ಪಂದ್ಯದಲ್ಲಿ ಭಾರತ 7 ವಿಕೆಟ್ ನಷ್ಟಕ್ಕೆ 190 ರನ್ ಗಳಿಸಿದೆ.

05 ಜುಲೈ, 2026 ಭಾನುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 116 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629


ಈ ಅಮೂಲ್ಯ ವಿಟಮಿನ್‌ನ ಮೂಲ ದೇಶ ನಮ್ಮದು » 2

ಪೌರಕಾರ್ಮಿಕರನ್ನು ಶೋಷಣೆ ಮಾಡಬೇಡಿ: ಪಿ.ರಘು » 3

ಜಾಗತಿಕ ಇಂಧನ ಬಿಕ್ಕಟ್ಟು ಎದುರಿಸಿದ್ದೇವೆ » 4

ರಾಜ್ಯದಲ್ಲಿ ಎಸ್‌ಐಆರ್ ಜಟಾಪಟಿ

ಪ್ರಕ್ರಿಯೆ ರದ್ದುಗೊಳಿಸಲು ಕುಮಾರಸ್ವಾಮಿ ಆಗ್ರಹ | ಬಿಜೆಪಿಯಿಂದ ಚುನಾವಣಾ ಆಯೋಗಕ್ಕೆ ದೂರು

• ಪ್ರಜೋದಯ ವರದಿ

ಬೆಂಗಳೂರು: ರಾಜ್ಯದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ ಸಂಬಂಧಿಸಿದಂತೆ ಆಡಳಿತರೂಢ ಕಾಂಗ್ರೆಸ್ ಹಾಗು ಪ್ರತಿಪಕ್ಷಗಳ ನಡುವೆ ಜಟಾಪಟಿ ನಡೆಯುತ್ತಿದೆ. ಈ ಸಂಬಂಧ ಬಿಜೆಪಿ ಶನಿವಾರ ರಾಜ್ಯ ಚುನಾವಣಾ ಆಯೋಗಕ್ಕೆ ದೂರು ನೀಡಿದರೆ, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ರಾಜ್ಯದಲ್ಲಿ ಎಸ್‌ಐಆರ್ ಪ್ರಕ್ರಿಯೆ ರದ್ದುಗೊಳಿಸಬೇಕೆಂದು ಕೇಂದ್ರ ಚುನಾವಣಾ ಆಯೋಗವನ್ನು ಆಗ್ರಹಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಹೆಚ್.ಡಿ. ಕುಮಾರಸ್ವಾಮಿ ಅವರು, ಕರ್ನಾಟಕದಲ್ಲಿ ಈಗಾಗಲೇ ನಡೆದಿರುವ ಎಸ್‌ಐಆರ್‌ಗೆ ಯಾವುದೇ ಅರ್ಥವಿಲ್ಲ. ಕೆಲವೆಡೆ ಮನೆಮನೆಗೆ ತೆರಳಿ ಎಸ್‌ಐಆರ್ ಪ್ರಕ್ರಿಯೆ ಕೈಗೊಳ್ಳುವ ಬದಲು ಕಲ್ಯಾಣ ಮಂಟಪದಲ್ಲಿ ಗಣತಿ ನಮೂನೆಯನ್ನು ನೀಡಲಾಗುತ್ತಿದೆ. ಹೀಗಾಗಿ ಕರ್ನಾಟಕದಲ್ಲಿ ಇದುವರೆಗೂ ನಡೆದಿರುವ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ(ಎಸ್‌ಐಆರ್)ಯನ್ನು ರದ್ದುಗೊಳಿಸಬೇಕೆಂದು ಆಗ್ರಹಿಸಿದರು.

ಲೋಪದ ಬಗ್ಗೆ ರಾಜ್ಯ ಮುಖ್ಯ ಚುನಾವಣಾಧಿಕಾರಿಗಳಿಗೆ ಜೆಡಿಎಸ್ ವತಿಯಿಂದ ದೂರು ಸಲ್ಲಿಸಲಾಗಿದೆ. ಅವರು ಚುನಾವಣಾ ಆಯೋಗಕ್ಕೆ ಕಳುಹಿಸಿಕೊಟ್ಟಿದ್ದು, ಅವರ ನಿರ್ದೇಶನದಂತೆ ಕ್ರಮ ಕೈಗೊಳ್ಳುವುದಾಗಿ ಹೇಳಿದ್ದಾರೆ. ಸೋಮವಾರ ದೆಹಲಿಗೆ ತೆರಳಿ ಭಾರತೀಯ ಚುನಾವಣಾ ಆಯೋಗದ ಆಯುಕ್ತರನ್ನು ಭೇಟಿ ಮಾಡಿ ಕರ್ನಾಟಕದಲ್ಲಿ ಎಸ್‌ಐಆರ್‌ಗೆ ಸಂಬಂಧಿಸಿದಂತೆ ನಡೆದಿರುವ ಘಟನೆಗಳ ಸಂಪೂರ್ಣ ವಿವರಗಳನ್ನು ನೀಡಿ ಈಗಾಗಲೇ ನಡೆದಿರುವ ಪ್ರಕ್ರಿಯೆಯನ್ನು ರದ್ದುಗೊಳಿಸುಂತೆ ಒತ್ತಾಯಿಸಲಾಗುವುದು ಎಂದರು. » ನಾಲ್ಕನೇ ಪುಟದಲ್ಲಿ

ಕ್ಯಾರೆ ಎನ್ನದ ಬಿಎಲ್‌ಒ

ಚುನಾವಣಾ ಆಯೋಗದ ಕಟ್ಟುನಿಟ್ಟಿನ ನಿರ್ದೇಶನದ ಹೊರತಾಗಿಯೂ ರಾಜ್ಯದ ನಾನಾ ಕಡೆ ಮತ್ತೆ ಮತದಾರರ ವಿಶೇಷ ತೀವ್ರ ಪರಿಷ್ಕರಣೆಯಲ್ಲಿ ಪುನಃ ಅಕ್ರಮಗಳ ಸರಮಾಲೆ ಮುಂದುವರೆದಿದೆ.

ನಿಗದಿಪಡಿಸಿದ ಸ್ಥಳದಲ್ಲೇ ಎಸ್‌ಐಆರ್ ನಡೆಸಬೇಕೆಂದು ಚುನಾವಣಾ ಆಯೋಗ ಶುಕ್ರವಾರ ಎಲ್ಲಾ ಜಿಲ್ಲಾಧಿಕಾರಿಗಳು ಮತ್ತು ಕೆಳಹಂತದ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿತ್ತು. ಆದರೆ, ಆಯೋಗದ ನಿರ್ದೇಶನಕ್ಕೆ ಕ್ಯಾರೆ ಎನ್ನದ ಬಿಎಲ್‌ಒಗಳು ಮತ್ತೆ ರಾಜ್ಯದ ನಾನಾ ಕಡೆ ಈ ಹಿಂದೆ ನಡೆಸಿದಂತೆ ಗುಂಪು ಪ್ರಕ್ರಿಯೆ ಮೂಲಕ ಎಸ್‌ಐಆರ್ ನಡೆಸುತ್ತಿರುವುದು ಬೆಳಕಿಗೆ ಬಂದಿದೆ.

ಹೊರ ರಾಜ್ಯದ ಅಧಿಕಾರಿಗಳ ನೇಮಿಸಲು ಚಿಂತನೆ

ರಾಜ್ಯಾದ್ಯಂತ ಸಾಕಷ್ಟು ಗೊಂದಲ ಸೃಷ್ಟಿಸಿರುವ ಮತದಾರರ ಪಟ್ಟಿ ಪರಿಷ್ಕರಣೆ (ಎಸ್‌ಐಆರ್) ಯಲ್ಲಿ ಸಾಕಷ್ಟು ಲೋಪ ದೋಷಗಳು ಕಂಡು ಬಂದ ಹಿನ್ನಲೆಯಲ್ಲಿ ಎಚ್ಚರಿಕೆ ಹೆಜ್ಜೆ ಇಟ್ಟಿರುವ ಭಾರತೀಯ ಚುನಾವಣಾ ಆಯೋಗ (ಇಸಿಐ) ಹೊರ ರಾಜ್ಯದ ಅಧಿಕಾರಿಗಳನ್ನು ವೀಕ್ಷಕರನ್ನಾಗಿ ನೇಮಿಸಲು ಗಂಭೀರ ಚಿಂತನೆ ನಡೆಸಿದೆ.

ವಿಶೇಷ ವೀಕ್ಷಕರು (ಮೈಕ್ರೊ ಅಬ್ಸರ್ವರ್) ಉಸ್ತುವಾರಿಯಲ್ಲಿ ಬೂತ್ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಎಸ್‌ಐಆರ್ ನಡೆಸಬೇಕಾಗುತ್ತದೆ. ಯಾವುದೇ ಮತದಾರರನ್ನು ಪಟ್ಟಿಯಿಂದ ತೆಗೆದು ಹಾಕುವುದು ಇಲ್ಲವೇ ಹೊಸದಾಗಿ ಸೇರ್ಪಡೆ ಮಾಡಬೇಕಾದರೆ ಬಿಎಲ್‌ಒ ಗಳು ಕಡ್ಡಾಯವಾಗಿ ವೀಕ್ಷಕರ ಅನುಮತಿ ಪಡೆಯಬೇಕು. ಅಧಿಕಾರಿಗಳು ಕಡ್ಡಾಯವಾಗಿ ಮನೆ ಮನೆಗೆ ತೆರಳಿ ಗಣತಿ ನಮೂನೆಯನ್ನು ನೀಡಬೇಕು. ಜೊತೆಗೆ ಆಯೋಗ ನಿಗದಿಪಡಿಸಿದ ಸ್ಥಳದಲ್ಲಿಯೇ ಎಸ್‌ಐಆರ್ ಪ್ರಕ್ರಿಯೆಯನ್ನು ನಡೆಸಬೇಕು.

52 ಸಾವಿರ ಕೋ. ರೂ. ವೆಚ್ಚದ ರಕ್ಷಣಾ ಸಾಮಗ್ರಿ ಖರೀದಿಗೆ ಒಪ್ಪಿಗೆ

• ಪ್ರಜೋದಯ ವರದಿ

ನವದೆಹಲಿ: ಸಶಸ್ತ್ರ ಪಡೆಗಳ ಯುದ್ಧ ಸಾಮರ್ಥ್ಯಗಳನ್ನು ಹೆಚ್ಚಿಸಲು ಸುಮಾರು 52,000 ಕೋಟಿ ರೂ. ಮೌಲ್ಯದ ವಿವಿಧ ಸ್ವಾಧೀನ ಪ್ರಸ್ತಾವ ನೆಗಳಿಗೆ ರಕ್ಷಣಾ ಸ್ವಾಧೀನ ಮಂಡಳಿ (ಡಿಎಸಿ) ತಾತ್ವಿಕವಾಗಿ ಆಡಳಿತಾತ್ಮಕ ಅನುಮೋದನೆ ನೀಡಿದೆ.

ಭಾರತೀಯ ಸೇನೆಗೆ, ಮಾನವ ರಹಿತ ವೈಮಾನಿಕ ವಾಹನಗಳು (ಯುಎವಿ) ಎಲೆಕ್ಟ್ರಾನಿಕ್ ಯುದ್ಧ ವ್ಯವಸ್ಥೆ ಆಕಾಶ್ ತರ್ನಾಗ್, ಮ್ಯಾನ್ ಪೋರ್ಟೆಬಲ್ ಆಂಟಿ- ಟ್ಯಾಂಕ್ ಗೈಡೆಡ್ ಕ್ಷಿಪಣಿ (ಎಂಪಿಎಟಿಜಿಎಂ) ವ್ಯವಸ್ಥೆಗಳು, ಮಧ್ಯಮ-ಶ್ರೇಣಿಯ ಮೇಲ್ಮೈಯಿಂದ ಗಾಳಿಗೆ ಕ್ಷಿಪಣಿ (ಎಂಆರ್‌ಎಸ್‌ಎಎಂ) ಶಸ್ತ್ರಾಸ್ತ್ರ ವ್ಯವಸ್ಥೆ, ಬಹಳ ಕಡಿಮೆ ವ್ಯಾಪ್ತಿಯ ವಾಯು ರಕ್ಷಣಾ ವ್ಯವಸ್ಥೆ (ವಿ-ಶೋರಾಡ್), ಟ್ಯಾಂಕ್‌ಗಳಿಗೆ ಸಕ್ರಿಯ ರಕ್ಷಣಾ ವ್ಯವಸ್ಥೆ ಮತ್ತು ಜೆಟ್-ಆಧಾರಿತ ಕಾಮಿಕೇಜ್ ಡ್ರೋನ್ ವ್ಯವಸ್ಥೆಯನ್ನು ಖರೀದಿಸಲು ಅನುಮೋದನೆ ನೀಡಲಾಗಿದೆಂದು ರಕ್ಷಣಾ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರ ಅಧ್ಯಕ್ಷತೆಯಲ್ಲಿ ನಡೆದ ಡಿಎಸಿ, ಸುಮಾರು 52,000 ಕೋಟಿ ರೂ. ಗಳ ಅಂದಾಜು ವೆಚ್ಚದಲ್ಲಿ ರಕ್ಷಣಾ ಪಡೆಗಳಿಗೆ ವಿವಿಧ ಸ್ವಾಧೀನ ಪ್ರಸ್ತಾವನೆಗಳಿಗೆ ಅಗತ್ಯತೆಯ ಸ್ವೀಕಾರ (ಎಒಎನ್) ಅನು ಮೋದನೆ ನೀಡಿದೆ ಎಂದು ಅದು ಹೇಳಿದೆ.

ಆಕಾಶ್ ತರ್ನಾಗ್ ಸೇನಾ ರಚನೆಗಳಿಗೆ ಪರಿಣಾಮಕಾರಿ ಯುಎವಿ ವಿರೋಧಿ ರಕ್ಷಣೆಯನ್ನು ಒದಗಿಸುತ್ತದೆ. ಶತ್ರುಗಳ ಯಾಂತ್ರಿಕೃತ ಬೆದರಿಕೆಗಳನ್ನು ಎದುರಿಸಲು ಪದಾತಿ ದಳದ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ, ಆದರೆ ವ್ಯವಸ್ಥೆಯು ವಿವಿಧ ರೀತಿಯ ಸ್ಟಾಂಡ್-ಆಫ್ ವೈಮಾನಿಕ ಬೆದರಿಕೆ ಗಳ ವಿರುದ್ಧ ಮಧ್ಯಮ-ಶ್ರೇಣಿಯ ವಾಯು ರಕ್ಷಣೆಯನ್ನು ಒದಗಿಸುತ್ತದೆ. ಬಹು-ಸ್ಪೆಕ್ಟಲ್ ಸೆನ್ಸಿಂಗ್ ಹೊಂದಿರುವ ಸೈನ್ಯದ ಪ್ರತಿ-ಅಳತೆಯ ಸ್ಥಿತಿಸ್ಥಾಪಕತ್ವ ಮತ್ತು ಪರಿಣಾಮಕಾರಿತ್ವವನ್ನು ಹೆಚ್ಚಿಸುತ್ತದೆಂದು ಹೇಳಿದೆ.

ಸಕ್ರಿಯ ರಕ್ಷಣಾ ವ್ಯವಸ್ಥೆಯು ಟ್ಯಾಂಕ್‌ಗಳ ರಕ್ಷಣಾ ಕಾರ್ಯ ವಿಧಾನವನ್ನು ಸುಧಾರಿಸಲು ಮತ್ತು ಅವುಗಳ ಬದುಕುಳಿಯುವಿಕೆಯನ್ನು ಹೆಚ್ಚಿಸಲು ಸಾಧ್ಯವಾ ಗುತ್ತದೆ. ಜೆಟ್-ಆಧಾರಿತ ಕಾಮಿಕೇಜ್ ಡ್ರೋನ್‌ಗಳು ಉತ್ತಮ ಎಲೆಕ್ಟ್ರಾನಿಕ್ ಯುದ್ಧ ಸಾಮರ್ಥ್ಯವನ್ನು ಒದಗಿಸುತ್ತವೆ, ಹೆಚ್ಚಿನ ಮಾರಕತೆ ಮತ್ತು ಬದುಕುಳಿಯುವಿಕೆಯೊಂದಿಗೆ ಮತ್ತು ವೆಚ್ಚ-ಪರಿಣಾಮಕಾರಿಯಾಗಿರುತ್ತವೆಂದು ಸಚಿವಾಲಯ ಹೇಳಿದೆ.

ಬಿರುಗಾಳಿ ಸಹಿತ ಮಳೆಗೆ ಧರೆಗುರುಳಿದ ಮರಗಳು

• ಪ್ರಜೋದಯ ವರದಿ

ಹಾಸನ: ಮಲೆನಾಡು ಭಾಗದಲ್ಲಿ ಕಳೆದ ಒಂದು ವಾರದಿಂದ ಬಿರುಗಾಳಿ ಸಹಿತ ಮಳೆ ಸುರಿಯುತ್ತಿದ್ದು, ಭಾರೀ ಗಾಳಿಗೆ ಸಕಲೇಶಪುರ ತಾಲ್ಲೂಕಿನ ಸರಗಳ್ಳಿ ಗ್ರಾಮದ ಸಮೀಪ ಎರಡು ಕಡೆ ರಸ್ತೆ ಮೇಲೆ ಮರಗಳು ಉರುಳಿ ಬಿದ್ದ ಪರಿಣಾಮ ಸಂಚಾರ ಅಸ್ತವ್ಯಸ್ತಗೊಂಡಿರು.

ಶನಿವಾರ ಬೆಳಗ್ಗಿನ ಜಾವ ಮರಗಳು ರಸ್ತೆ ಮೇಲೆ ಬಿದ್ದಿದ್ದರಿಂದ ಯಾವುದೇ ಹಾನಿ ಸಂಭವಿ ಸಿಲ್ಲ. ರಸ್ತೆ ಸಂಪೂರ್ಣ ಬಂದ್ ಆಗಿದ್ದರಿಂದ ಉಚ್ಚಂಗಿ-ಕೆರೋಡಿ ಮಾರ್ಗದಲ್ಲಿ ವಾಹನ ಸಂಚಾರ ಕೆಲಕಾಲ ಸ್ಥಗಿತಗೊಂಡಿತ್ತು. ಅದರಿಂದ ಈ ಮಾರ್ಗವನ್ನು ಅವಲಂಬಿಸಿರುವ ಹಲವು ಗ್ರಾಮಗಳ ರಸ್ತೆ ಸಂಪರ್ಕವೂ ತಾತ್ಕಾಲಿಕವಾಗಿ ಕಡಿತಗೊಂಡಿತು.

ಮಾಹಿತಿ ತಿಳಿದ ಸ್ಥಳೀಯರು ಅರಣ್ಯ ಇಲಾಖೆ ಅಧಿಕಾರಿಗಳಿಗೆ ವಿಷಯ ಮುಟ್ಟಿಸಿದ್ದಾರೆ. ತಕ್ಷಣವೇ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ಮರಗಳನ್ನು ತೆರವುಗೊಳಿಸುವ ಕಾರ್ಯ ಕೈಗೊಂಡರು. ಕೆಲವೇ ಹೊತ್ತಿನಲ್ಲಿ ರಸ್ತೆ ಸಂಚಾರಕ್ಕೆ ಮುಕ್ತವಾಗಿದ್ದು, ವಾಹನಗಳ ಓಡಾಟ ಎಂದಿನಂತೆ ಆರಂಭ ವಾಯಿತು. ಮಲೆನಾಡು ಭಾಗದಲ್ಲಿ ಕಳೆದ ಕೆಲವು ದಿನಗಳಿಂದ ಗಾಳಿ ಸಹಿತ ಮಳೆ ಮುಂದುವರಿದಿರುವ ಹಿನ್ನಲೆ ರಸ್ತೆ ಬದಿಯ ಮರಗಳು ಉರುಳುವ ಸಾಧ್ಯತೆ ಇರುವುದರಿಂದ ವಾಹನ ಸವಾರರು ಎಚ್ಚರಿಕೆಯಿಂದ ಸಂಚರಿಸಬೇಕೆಂದು ಸ್ಥಳೀಯರು ಮನವಿ ಮಾಡಿದ್ದಾರೆ.

ಎಲ್ಲೆಲ್ಲಿ ಎಷ್ಟು ಮಳೆ

ಕಳೆದ 24 ಗಂಟೆ ಅವಧಿಯಲ್ಲಿ ಸಕಲೇಶಪುರ ತಾಲ್ಲೂಕಿನ ಹೆತ್ತೂರು ಹೋಬಳಿಯಲ್ಲಿ 88 ಮಿ.ಮೀಟರ್ ಮಳೆಯಾಗಿದೆ. ಹಾನುಬಾಳು ಹೋಬಳಿಯಲ್ಲಿ 49 ಮಿಮೀ, ಯಸಳೂರು ಹೋಬಳಿಯಲ್ಲಿ 50 ಮಿಮೀ, ಬೆಳಗೋಡು 16 ಮಿಮೀ, ಸಕಲೇಶಪುರ ಪಟ್ಟಣ 28 ಮಿಮೀ, ಆಲೂರು ತಾಲ್ಲೂಕಿನ ಕೆ.ಹೊಸಕೋಟೆಯಲ್ಲಿ 17 ಮಿಮೀ, ಕುಂದೂರು 10 ಮಿಮೀ, ಅರಕಲಗೂಡು ತಾಲ್ಲೂಕಿನ ರಾಮನಾಥಪುರ ಹೋಬಳಿಯಲ್ಲಿ 17 ಮಿಮೀ, ಬೇಲೂರು ತಾಲ್ಲೂಕಿನ ಅರೇಹಳ್ಳಿಯಲ್ಲಿ 22 ಮಿಮೀ ಮಳೆಯಾಗಿದೆ.

ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ಪಿ.ರಘು ಸೂಚನೆ

ಪೌರಕಾರ್ಮಿಕರಿಗೆ ನಿವೇಶನ, ಸೌಕರ್ಯಕ್ಕೆ ಆದ್ಯತೆ ನೀಡಿ

• ಪ್ರಜೋದಯ ವರದಿ

ಹಾಸನ: ಪೌರಕಾರ್ಮಿಕರಿಗೆ ಆದ್ಯತೆ ಮೇರೆಗೆ ನಿವೇಶನ ಒದಗಿಸುವುದು, ಮೂಲಸೌಕರ್ಯ ಕಲ್ಪಿಸುವುದು ಹಾಗು ಅವರ ವಿವಿಧ ಸಮಸ್ಯೆಗಳನ್ನು ತ್ವರಿತವಾಗಿ ಪರಿಹರಿಸಲು ಅಧಿಕಾರಿಗಳು ಕ್ರಮವಹಿಸಬೇಕೆಂದು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ಪಿ.ರಘು ಅವರು ಸೂಚಿಸಿದರು.

ಜಿಲ್ಲಾ ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ ಸ್ಥಳೀಯ ಸಂಸ್ಥೆ, ಗ್ರಾಮ ಪಂಚಾಯಿತಿಗಳು ಹಾಗೂ ವಿವಿಧ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾ ಕಾರ್ಮಿಕರಿಗೆ ಸಂಬಂಧಿಸಿದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಪೌರಕಾರ್ಮಿಕರಿಗೆ ಸಮವಸ್ತ್ರ, ಸುರಕ್ಷತಾ ಪರಿಕರಗಳನ್ನು ಒದಗಿಸುವುದು, ನಿಯಮಿತ ಆರೋಗ್ಯ ತಪಾಸಣೆ ನಡೆಸುವುದು ಹಾಗು ಇಎಸ್‌ಐ ಮತ್ತು ಪಿಎಫ್ ಸೌಲಭ್ಯಗಳು ಸಮರ್ಪಕವಾಗಿ ದೊರೆಯುತ್ತಿವೆಯೇ ಎಂಬು ದನ್ನು ಅಧಿಕಾರಿಗಳು ಖಚಿತಪಡಿಸಿಕೊಳ್ಳಬೇಕು. ವಿಶ್ರಾಂತಿ ಕೊಠಡಿಗಳ ವ್ಯವಸ್ಥೆ ಕಲ್ಪಿಸಲು ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು.

ನೇರಪಾವತಿ ವ್ಯವಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕಾರ್ಮಿಕರು ಮೃತಪಟ್ಟಲ್ಲಿ ಅವರ ಅವಲಂಭಿತರಿಗೆ ಉದ್ಯೋಗ ನೀಡುವ ನಿಯಮವನ್ನು ಅನುಷ್ಠಾನಗೊಳಿಸುವಂತೆ ಸೂಚಿಸಿದರು. ಜಿಲ್ಲೆಯಲ್ಲಿ ಇಂತಹ 39 ಪ್ರಕರಣಗಳಿದ್ದು, ಅಗತ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ತಿಳಿಸಿದ ಅವರು, ಸ್ವಚ್ಛತಾ ಕಾರ್ಮಿಕರ ಮಕ್ಕಳಿಗೆ ಉಚಿತ ಶಿಕ್ಷಣ, ಕೌಶಲ್ಯಾಭಿವೃದ್ಧಿ ತರಬೇತಿ ಹಾಗೂ ಸರ್ಕಾರದ ವಿವಿಧ ಯೋಜನೆಗಳ ಮಾಹಿತಿ ತಲುಪಿಸಲು ವಿಶೇಷ ಗಮನ ಹರಿಸಬೇಕೆಂದು ಹೇಳಿದರು.

5 ದಿನದಲ್ಲಿ ವರದಿ ಸಲ್ಲಿಸಲು ಸೂಚನೆ

ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ ಅವರು ಮಾತನಾಡಿ, ಕೆಎಸ್ ಆರ್‌ಟಿಸಿ ಬಸ್ ನಿಲ್ದಾಣ ದಲ್ಲಿ ಕಾರ್ಯನಿರ್ವಹಿಸುವ ಕಾರ್ಮಿಕರಿಗೆ ಕೇವಲ 6 ಸಾವಿರ ರೂ. ನಗದು ವೇತನ ನೀಡಲಾಗುತ್ತಿದೆಂಬ ಮಾಹಿತಿ ಬಂದ ಹಿನ್ನಲೆ ಕಾರ್ಮಿಕ ಇಲಾಖೆ ಹಾಗು ಲೀಡ್ ಬ್ಯಾಂಕ್ ಅಧಿಕಾರಿಗಳು ಬ್ಯಾಂಕ್ ಖಾತೆ, ಇಎಸ್‌ಐ ಮತ್ತು ಪಿಎಫ್ ಪಾವತಿ ಕುರಿತು ಪರಿಶೀಲಿಸಿ ಐದು ದಿನಗಳೊಳಗೆ ವರದಿ ಸಲ್ಲಿಸಬೇಕೆಂದು ಸೂಚಿಸಿದರು.

ಸಂಬಂಧಿತ ಏಜೆನ್ಸಿಯ ವಿರುದ್ಧ ಪ್ರಕರಣ ದಾಖಲಿಸಿ ಕಪ್ಪುಪಟ್ಟಿಗೆ ಸೇರಿಸುವ ಪ್ರಕ್ರಿಯೆ ಕೈಗೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಕಾರ್ಮಿಕರ ವೇತನ ಬ್ಯಾಂಕ್ ಖಾತೆಗಳಿಗೆ ಜಮೆಯಾಗುತ್ತಿದೆಯೇ ಹಾಗೂ ಆರೋಗ್ಯ ತಪಾಸಣೆ ನಿಯಮಿತವಾಗಿ ನಡೆಯುತ್ತಿ ದೆಯೇ ಎಂಬುದನ್ನೂ ಪರಿಶೀಲಿಸುವಂತೆ ಸೂಚಿಸಿದರು.

ಕೊಣನೂರು ಗ್ರಾಮದ ಸರ್ವೆ ಸಂಖ್ಯೆ 163ರಲ್ಲಿ ಸುಮಾರು 60 ವರ್ಷಗಳಿಂದ ವಾಸಿಸುತ್ತಿ ರುವ 131 ಕುಟುಂಬಗಳ 94ಸಿ ಹಾಗೂ 94ಸಿಸಿ ಅರ್ಜಿಗಳನ್ನು » ನಾಲ್ಕನೇ ಪುಟದಲ್ಲಿ

ಏಜೆನ್ಸಿಯನ್ನು ಕಪ್ಪುಪಟ್ಟಿಗೆ ಸೇರಿಸಿ

ಹಾಸನ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಸ್ವಚ್ಛತಾ ಕಾರ್ಯಕ್ಕೆ ಅಗತ್ಯ ಸಿಬ್ಬಂದಿಯನ್ನು ನೇಮಕ ಮಾಡಿಲ್ಲ. ಕಾರ್ಮಿಕರಿಗೆ ಇಎಸ್‌ಐ, ಪಿಎಫ್ ಸೌಲಭ್ಯ ಕಲ್ಪಿಸದೇ ಕೇವಲ 6 ಸಾವಿರವನ್ನು ನಗದು ರೂಪದಲ್ಲಿ ನೀಡುತ್ತಿರುವ ಮಾಹಿತಿ ಲಭ್ಯವಾಗಿದೆ. ಈ ಸಂಬಂಧ ಅಧಿಕಾರಿಗಳು ಏಜೆನ್ಸಿಯ ವಿರುದ್ಧ ಕ್ರಮ ಕೈಗೊಂಡು ಕಪ್ಪುಪಟ್ಟಿಗೆ ಸೇರಿಸುವಂತೆ ಆಯೋಗದ ಅಧ್ಯಕ್ಷ ಪಿ.ರಘು ಅವರು ನಿರ್ದೇಶನ ನೀಡಿದರು.

ಕ್ಷುಲ್ಲಕ ವಿಚಾರಕ್ಕೆ ಗಲಾಟೆ: ಅಪ್ಪ-ಮಗನ ಮೇಲೆ ಹಲ್ಲೆ

• ಪ್ರಜೋದಯ ವರದಿ

ಹೊಳೆನರಸೀಪುರ: ಕ್ಷುಲ್ಲಕ ವಿಚಾರಕ್ಕೆ ನೆರೆಹೊರೆಯವರ ನಡುವೆ ನಡೆದ ಗಲಾಟೆಯಲ್ಲಿ ವೃದ್ಧ ತಂದೆ ಹಾಗು ಪುತ್ರ ಗಾಯಗೊಂಡಿರುವ ಘಟನೆ ತಾಲ್ಲೂಕಿನ ನಿಡುವಾಣಿ ಗ್ರಾಮದಲ್ಲಿ ನಡೆಸಿದೆ. ಎನ್. ಎಂ.ರಾಜಪ್ಪ (72) ಮತ್ತು ಅವರ ಪುತ್ರ ಸಚಿನ್ (24) ಗಾಯಾಳು.

ಎಂಟು ವರ್ಷಗಳ ಹಿಂದೆ ಗ್ರಾಮದಲ್ಲಿ ಮನೆ ಖರೀದಿಸಿದ್ದ ರಾಜಪ್ಪ ಕುಟುಂಬವು ಮನೆಯ ಹಿಂಭಾಗದಲ್ಲಿ ಜಾನುವಾರುಗಳನ್ನು ಸಾಕುತ್ತಿತ್ತು. ಜಾನುವಾರುಗಳ ಗಂಜಲ ಸರಾಗವಾಗಿ ಹರಿದು ಹೋಗುವಂತೆ ಮಾಡಲು ಸಚಿನ್ ಮನೆಯ ಹಿಂಭಾಗದಲ್ಲಿ ಗುಂಡಿ ತೆಗೆಯುತ್ತಿದ್ದ ವೇಳೆ ಅಕ್ಕಪಕ್ಕದ ನಿವಾಸಿಗಳಾದ ಗಣೇಶ, ವಿಶ್ವ ಹಾಗು ಸೌಮ್ಯ ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದರಿಂದ ಮಾತಿನ ಚಕಮಕಿ ನಡೆದಿದೆ.

ವಿವಾದ ತಾರಕಕ್ಕೇರಿದ ಬಳಿಕ ಆರೋಪಿಗಳು ಸಚಿನ್ ಮೇಲೆ ಹಲ್ಲೆ ನಡೆಸಿದ್ದಾರೆ. ಪುತ್ರನನ್ನು ರಕ್ಷಿಸಲು ಮುಂದಾದ ರಾಜಪ್ಪ ಅವರ ಮೇಲೂ ಕಲ್ಲಿನಿಂದ ಹಲ್ಲೆ ನಡೆಸಿದ ಪರಿಣಾಮ ಇಬ್ಬರೂ ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಹೊಳೆನರಸೀಪುರ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಮಾಹಿತಿ ತಿಳಿದ ಹಳ್ಳಿಮೈಸೂರು ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾ

ಈ ಅಮೂಲ್ಯ ವಿಟಮಿನ್‌ನ ಮೂಲ ನಮ್ಮ ದೇಶ!

ವಿಶೇಷವೆಂದರೆ, ಇಂದು ಇಡೀ ಜಗತ್ತಿಗೆ ವ್ಯಾಪಿಸಿರುವ ಸಿಟ್ರಸ್ ಹಣ್ಣುಗಳ ಮೂಲ, ಭಾರತ ಮತ್ತು ಭಾರತ ಉಪಖಂಡ! ಇದನ್ನು ನಾವು ಹೆಮ್ಮೆಯಿಂದಲೇ ಹೇಳಿಕೊಳ್ಳಬಹುದು. ಮನುಷ್ಯನಿಗೆ ಅನಿವಾರ್ಯವಾಗಿ ಅಗತ್ಯವಿರುವ ವಿಟಮಿನ್ ಸಿ ಯ ಅತಿ ಶ್ರೀಮಂತ ಮೂಲವೇ ಈ ಸಿಟ್ರಸ್ ಹಣ್ಣುಗಳು. ನಮ್ಮ ನಾಡಿನಲ್ಲಿ, ನಮ್ಮ ದೇಶದಲ್ಲಿ ಲಿಂಬೆ, ಕಿತ್ತಳೆ, ಮುಸುಂಬಿ, ಎಳ್ಳಿ ಕಾಯಿ, ದುಡ್ಲೆ, ಗಜನಿಂಬೆ, ಕಂಚಿ ಮೊದಲಾದ ಹಣ್ಣುಗಳು ಸುಲಭವಾಗಿ ಬೆಳೆಯುವುದರಿಂದ, ಅಷ್ಟರ ಮಟ್ಟಿಗೆ ನಾವು ಅದೃಷ್ಟವಂತರೆಂದೇ ಹೇಳಿಕೊಳ್ಳಬೇಕು.

ಶಾಂಕಣ

ಲಿಂಬೆ ಹಣ್ಣು ಮತ್ತು ಕಿತ್ತಳೆ ಹಣ್ಣಿನ ಮಹತ್ವವನ್ನು ಎತ್ತಿ ತೋರಿಸುವ ಒಂದು ಅಪೂರ್ವ ಎನಿಸುವ ಬರಹವನ್ನು ಹಿರಿಯ ವೈದ್ಯರೂ, ಅಂಕಣಕಾರರೂ ಆದ ನಾ. ಸೋಮೇಶ್ವರ ಅವರು ಇತ್ತೀಚೆಗೆ ಬರೆದಿದ್ದಾರೆ. (ವಿಶ್ವವಾಣಿ : 24.6.2026). 1747ರಲ್ಲಿ ಬ್ರಿಟಿಷ್ ವೈದ್ಯನೊಬ್ಬನು, ವಿಟಮಿನ್ ಸಿ ಕೊರತೆಯಿಂದ ಬಳಲುತ್ತಿದ್ದ ಕೆಲವು ನಾವಿಕರ ಮೇಲೆ ಪ್ರಯೋಗಾರ್ಥವಾಗಿ, ಲಿಂಬೆ ರಸ ಮತ್ತು ಕಿತ್ತಳೆಯ ಪ್ರಯೋಗ ಮಾಡಿದನು: ಅಂದರೆ, ಇವುಗಳ ರಸವನ್ನು ಕುಡಿಸಿದನು. ಆ ನಾವಿಕರು ಹಲವು ವಾರಗಳ ಕಾಲ ಸಮುದ್ರದಲ್ಲಿ ಓಡಾಡುತ್ತಿದ್ದು, ತೀವ್ರ ಬಳಲಿಕೆ ತರುವ ಸ್ಕರ್ವಿ ಎಂಬ ರೋಗದಿಂದ ನರಳುತ್ತಿದ್ದರು.

ಅವರನ್ನು ಐದು ಗುಂಪುಗಳನ್ನಾಗಿಸಿ, ಪ್ರತ್ಯೇಕ ಗುಂಪಿಗೆ ಸೇಬಿನ ಮದ್ಯ, ಗಂಧಕಾಮ್ಲದ ಹನಿ, ಮೂರು ಚಮಚ ವಿನೆಗರ್, ಅರ್ಧ ಪಿಂಟ್ ಸಮುದ್ರದ ನೀರು, ಬೆಳ್ಳುಳ್ಳಿ ಸಾಸಿವೆ ಕಷಾಯ ಮತ್ತು ಒಂದು ಗುಂಪಿಗೆ ದಿನಕ್ಕೆರಡು ಕಿತ್ತಳೆ ಮತ್ತು ಒಂದು ಲಿಂಬೆ ಹಣ್ಣಿನ ರಸವನ್ನು ಕುಡಿಸಲಾಯಿತು. ಸಿಟ್ರಸ್ ಹಣ್ಣುಗಳಾದ ಕಿತ್ತಳೆ ಮತ್ತು ಲಿಂಬೆಯನ್ನು ಸೇವಿಸಿದ ನಾವಿಕರ ತಂಡವು ಒಂದು ವಾರದಲ್ಲೇ ಚೇತರಿಕೆ ಕಂಡು, ಬಹುಬೇಗನೆ ವಿಟಮಿನ್ ಸಿ, ಅವರ ರೋಗವನ್ನು ಗುಣಮುಖರನ್ನಾಗಿಸಿತ್ತು.

ಆ ನಂತರ, ಬ್ರಿಟಿಷ್ ಸೇನೆ ಮತ್ತು ಹಡಗುಗಳ ನಾವಿಕರು ಲಿಂಬೆ, ಕಿತ್ತಳೆ ಮೊದಲಾದ ಸಿಟ್ರಸ್ ಹಣ್ಣುಗಳನ್ನು ನಿಯಮಿತವಾಗಿ ಸೇವಿಸಿ, ಯುದ್ಧಗಳನ್ನೇ ಗೆದ್ದರು! ಆದ್ದರಿಂದ, ಬ್ರಿಟಿಷರು ತಮ್ಮ ಸೂರ್ಯ ಮುಳುಗದ ಸಾಮ್ರಾಜ್ಯವನ್ನು ಸ್ಥಾಪಿಸಲು, ಸಿಟ್ರಸ್ ಹಣ್ಣುಗಳೇ ಕಾರಣ ಎಂದೂ ಹೊಗಳಲಾಗಿದೆ!

ಆದರೆ, ಆಗಿನ್ನೂ ವಿಟಮಿನ್ ಸಿ ಎಂಬದರ ಹೆಚ್ಚಿನ ವಿವರಗಳು ವೈದ್ಯಲೋಕಕ್ಕೆ ಗೊತ್ತಿರಲಿಲ್ಲ. ನಮ್ಮ ದೇಹವು ವಿಟಮಿನ್ ಸಿಯನ್ನು ತಾನಾಗಿಯೇ ಉತ್ಪಾದಿಸಲಾರದು ಎಂಬುದೂ ಗೊತ್ತಿರಲಿಲ್ಲ. ಅದನ್ನು ಪ್ರತಿದಿನ ಆಹಾರದ ಮೂಲಕವೇ ಪಡೆಯಬೇಕು ಎಂಬುದು ನಂತರ ಗೊತ್ತಾಯಿತು. ಇಂದು ಪ್ರತಿ ದಿನ ಸಿಟ್ರಸ್ ರಸವನ್ನು, ಅಂದರೆ ಲಿಂಬೆ ಹಣ್ಣಿನ ರಸ ಅಥವಾ ಮೂಸಂಬಿ, ಕಿತ್ತಳೆ ಮೊದಲಾದ ಹಣ್ಣುಗಳನ್ನು ತಿನ್ನುವುದು ಉತ್ತಮ ಅಭ್ಯಾಸ ಎಂದು ಋಜುವಾತಾಗಿದೆ. ಆರೋಗ್ಯದ ಕುರಿತು ಕಾಳಜಿ ಇರುವವರೆಲ್ಲರೂ, ಬೇರೆ ಉತ್ತಮ ಆಹಾರದ ಜತೆ ಇವುಗಳನ್ನು ಸೇವಿಸುತ್ತಾರೆ. ಅಷ್ಟರ ಮಟ್ಟಿಗೆ ಅದು ನಮ್ಮ ದಿನಚರಿಯಲ್ಲಿ, ಆಹಾರದಲ್ಲಿ ಅನಿವಾರ್ಯ!

ವಿಶೇಷವೆಂದರೆ, ಇಂದು ಇಡೀ ಜಗತ್ತಿಗೆ ವ್ಯಾಪಿಸಿರುವ ಸಿಟ್ರಸ್ ಹಣ್ಣುಗಳ ಮೂಲ, ಭಾರತ ಮತ್ತು ಭಾರತ ಉಪಖಂಡ! ಇದನ್ನು ನಾವು ಹೆಮ್ಮೆಯಿಂದಲೇ ಹೇಳಿಕೊಳ್ಳಬಹುದು. ಮನುಷ್ಯನಿಗೆ ಅನಿವಾರ್ಯವಾಗಿ ಅಗತ್ಯವಿರುವ ವಿಟಮಿನ್ ಸಿಯ ಅತಿ ಶ್ರೀಮಂತ ಮೂಲವೇ ಈ ಸಿಟ್ರಸ್ ಹಣ್ಣುಗಳು. ನಮ್ಮ ನಾಡಿನಲ್ಲಿ, ನಮ್ಮ ದೇಶದಲ್ಲಿ ಲಿಂಬೆ, ಕಿತ್ತಳೆ, ಮುಸುಂಬಿ, ಎಳ್ಳಿ ಕಾಯಿ, ದುಡ್ಲೆ, ಗಜನಿಂಬೆ, ಕಂಚಿ ಮೊದಲಾದ ಹಣ್ಣುಗಳು ಸುಲಭವಾಗಿ ಬೆಳೆಯುವುದರಿಂದ, ಅಷ್ಟರ ಮಟ್ಟಿಗೆ ನಾವು ಅದೃಷ್ಟವಂತರೆಂದೇ ಹೇಳಿಕೊಳ್ಳಬೇಕು. ಜತೆಗೆ ಇಡೀ ಜಗತ್ತಿಗೆ ಸಿಟ್ರಸ್ ಹಣ್ಣನ್ನು ಕೊಟ್ಟ ನಾಡು ನಮ್ಮದು ಎಂಬುದೂ ಒಂದು ಹಿರಿಮೆಯೇ ಸರಿ.

ಬೇರೆ ಬೇರೆ ದೇಶಗಳಿಂದ ನಮ್ಮ ದೇಶಕ್ಕೆ ವಲಸೆ ಬಂದ ಸಸ್ಯ ಮತ್ತು ತರಕಾರಿಗಳ ಕುರಿತು ಸಾಕಷ್ಟು ವಿಚಾರಗಳನ್ನು ಕೇಳಿರಬಹುದು; ದೂರದ ದಕ್ಷಿಣ ಅಮೆರಿಕದಿಂದಲೋ, ಯುರೋಪಿನಿಂದಲೋ ಬಂದ ತರಕಾರಿ ಮತ್ತು ಸಸ್ಯಗಳ ಕುರಿತು ನಮಗೆ ಸಾಕಷ್ಟು ಕುತೂಹಲ, ಅಪಾರ ಬೆರಗು ಸಹ! ಉದಾಹರಣೆಗೆ ಮೆಣಸಿನ ಕಾಯಿಯು ದಕ್ಷಿಣ ಅಮೆರಿಕದ ಸಸ್ಯ; ಅದನ್ನು ಕೊಲಂಬಸ್ (1451–1506) ಮತ್ತು ಯುರೋಪಿಯನರು ಹೊರಜಗತ್ತಿಗೆ ಪರಿಚಯಿಸಿದರು; ಪೋರ್ಚುಗೀಸರ ಮೂಲಕ ಅದು ನಮ್ಮ ದೇಶಕ್ಕೂ ಬಂದಿರಬೇಕು; ನಮ್ಮ ದೇಶದಲ್ಲಿ ಈ ವಿದೇಶಿ ಸಸ್ಯವು ಮಾಡಿದ ಕ್ರಾಂತಿ ಅಷ್ಟಿಷ್ಟಲ್ಲ; ಕಾಳು ಮೆಣಸಿನ ಪ್ರಾಬಲ್ಯವನ್ನು ಮುರಿದದ್ದೇ ಈ ಮೆಣಸಿನ ಕಾಯಿ; ಆ ಮೂಲಕ, ಮಧ್ಯಯುಗದಲ್ಲಿ ನಮ್ಮ ದೇಶಕ್ಕೆ ಬರುತ್ತಿದ್ದ ಆದಾಯವನ್ನೂ ಪರೋಕ್ಷವಾಗಿ ತಪ್ಪಿಸಿತು!

ನಾನಾ ರೀತಿಯ ಮೆಣಸಿನ ಗಿಡಗಳು, ಕಾಯಿಗಳು ನಮ್ಮ ನಾಲಗೆಯ ರುಚಿಯನ್ನು ತಣಿಸಿವೆ. ಚೂರು ಮೆಣಸು, ಬೋಂಡಾ ಮೆಣಸು, ಜೀರಿಗೆ ಮೆಣಸು, ಕ್ಯಾಪ್ಸಿಕಂ, ಹಸಿ ಮೆಣಸು ಇ.ಇ. ವಿಶೇಷವೆಂದರೆ, ಮೆಣಸಿನ ಕಾಯಿಯು ಯುರೋಪಿನಲ್ಲಿ ಪರಿಚಯಗೊಳ್ಳುವ ತನಕ, ನಮ್ಮ ನಾಡಿನ ಕಾಳು ಮೆಣಸು ಮಾತ್ರ ಆ ಜನರಿಗೆ ಖಾರ ನೀಡುವ ಸಂಬಾರ ಪದಾರ್ಥ ಎನಿಸಿತ್ತು! ಇದೇ ರೀತಿ, ಗೋಡಂಬಿ ಗಿಡವು ಗುಣಮುಖರಾದರು. ಲಿಂಬೆ ಮತ್ತು ಕಿತ್ತಳೆಯಲ್ಲಿರುವ

ಮೂಲತಃ ದಕ್ಷಿಣ ಅಮೆರಿಕದ ಬ್ರೆಜಿಲ್ ಪ್ರದೇಶದ್ದು; ಇದನ್ನು ಸಹ ಯುರೋಪಿಯನ್ ನಾವಿಕರು ಅಮೆರಿಕದಿಂದ ಯುರೋಪಿಗೆ ತಂದು, ಅಲ್ಲಿಂದ ಗೋವಾ ಮೂಲಕ ನಮ್ಮ ದೇಶಕ್ಕೆ ಪರಿಚಯಿಸಿದರು.

ಇಂತಹ ಹಲವು ವಿದೇಶಿ ಮೂಲದ ಸಸ್ಯಗಳು ನಮ್ಮ ನಾಲಗೆಯ ರುಚಿ ಹೆಚ್ಚಿಸಿವೆ; ಎಷ್ಟರ ಮಟ್ಟಿಗೆ ಎಂದರೆ, ಮೆಣಸಿನ ಕಾಯಿಯಂತಹ ರುಚಿಕರ, ಖಾರ, ಘಾಟಿನ ಸಸ್ಯವನ್ನು ಹೊರಗಿಟ್ಟು ನಮ್ಮ ದಿನಚರಿಯನ್ನು ಇಂದು ಊಹಿಸಿಕೊಳ್ಳಲು ಸಹ ಸಾಧ್ಯವಿಲ್ಲ.

ಇದಕ್ಕೆ ಸಂವಾದಿಯಾಗಿ, ನಮ್ಮ ದೇಶದ ಮೂಲದ ಹಲವು ಸಸ್ಯಗಳು ಯುರೋಪ್, ಅಮೆರಿಕ ಮೊದಲಾದ ಪ್ರದೇಶಗಳಿಗೆ ಪಯಣಿಸಿವೆ, ವಲಸೆ ಹೋಗಿವೆ. ಅವುಗಳಲ್ಲಿ ಅಗ್ರಗಣ್ಯ ಎಂದರೆ ಲಿಂಬೆ ಮತ್ತು ಸಿಟ್ರಸ್ ಜಾತಿಯ ಸಸ್ಯಗಳು. ಅದರಲ್ಲೂ ಲಿಂಬೆ, ಕಿತ್ತಳೆ ಮೊದಲಾದ ಸಿಟ್ರಸ್ ಹಣ್ಣುಗಳು ಜಗತ್ತಿನ ನಾಗರಿಕತೆಯ ವಿಕಸನಕ್ಕೆ ನೀಡಿರುವ ಕೊಡುಗೆ ಅಪಾರ, ಅಮೂಲ್ಯ.

1747ರಲ್ಲಿ, ಅಂದರೆ ನಮ್ಮ ದೇಶಕ್ಕೆ ಸ್ವಾತಂತ್ರ್ಯ ದೊರಕುವ 200 ವರ್ಷಗಳ ಹಿಂದೆ, ರಾಯಲ್ ನೇವಿಯ ವೈದ್ಯ ಜೇಮ್ ಲಿಂಡ್‌ನು ತನ್ನ ದೇಶದ ನಾವಿಕರಿಗೆ ಲಿಂಬೆ ರಸವನ್ನು ಕುಡಿಸಿ, ಸ್ಕರ್ವಿ ರೋಗವನ್ನು ವಾಸಿ ಮಾಡಿದ್ದು ಐತಿಹಾಸಿಕ ಘಟನೆ. ಆದರೆ, ಅದಕ್ಕೂ ಬಹಳ ಮೊದಲೇ ಲಿಂಬೆ ಮತ್ತು ಇತರ ಸಿಟ್ರಸ್ ಹಣ್ಣುಗಳು ನಮ್ಮ ದೇಶದಿಂದ ಯುರೋಪ್ ಮೊದಲಾದ ದೇಶಗಳನ್ನು ತಲುಪಿದ್ದವು. ಬಹು ಪುರಾತನ ಕಾಲದಲ್ಲಿ ನಡೆದ ವಲಸೆ, ನಂತರ ಅರೆಬಿಯನ್ ವರ್ತಕರ ಮೂಲಕ ಲಿಂಬೆ ಮತ್ತು ಇತರ ಸಿಟ್ರಸ್ ಹಣ್ಣುಗಳು ಯುರೋಪ್ ತಲುಪಿದವು ಎಂದು ತಿಳಿಯಲಾಗಿದೆ.

ಎರಡನೆಯ ಶತಮಾನದಲ್ಲೇ ಇಟೆಲಿ ಮತ್ತು ರೋಮ್ ಸಾಮ್ರಾಜ್ಯವನ್ನು ಲಿಂಬೆ ಪ್ರವೇಶಿಸಿತ್ತು. ಪರ್ಷಿಯಾ, ಇರಾಕ್, ಈಜಿಪ್ಟ್‌ಗೆ ಕ್ರಿ.ಶ.700ರಲ್ಲಿ ಲಿಂಬೆ ಪ್ರವೇಶವಾಯಿತು. ಹತ್ತನೆಯ ಶತಮಾನದಲ್ಲಿ ಅರೇಬಿಯಾದ ತೋಟಗಳಲ್ಲಿ ಲಿಂಬೆಯನ್ನು ಅಲಂಕಾರಿಕ ಸಸ್ಯವನ್ನಾಗಿ ಬೆಳೆಸಲಾಗುತ್ತಿತ್ತು. ಯುರೋಪ್‌ನಲ್ಲಿ 15ನೆಯ ಶತಮಾನದಲ್ಲಿ, ಅಮೆರಿಕದಲ್ಲಿ ಹದಿನಾರನೆ ಶತಮಾನದಲ್ಲಿ ಲಿಂಬೆಯ ತೋಟಗಳು, ಕಿತ್ತಳೆಯ ತೋಟಗಳು (ಆರೆಂಜರಿ) ತಲೆ ಎತ್ತಿದವು. ಯುರೋಪಿನ ಆರೆಂಜರಿಗಳು ಪ್ರತಿಷ್ಠೆಯ ವನಗಳಾಗಿದ್ದವು! 1493ರಲ್ಲಿ ಕ್ರಿಸ್ಟೊ-ರ್ ಕೊಲಂಬಸನು ಲಿಂಬೆಯ ಬೀಜಗಳನ್ನು ವೆಸ್ಟ್ ಇಂಡೀಸ್ ಮತ್ತು ದಕ್ಷಿಣ ಅಮೆರಿಕಕ್ಕೆ ಕೊಂಡೊಯ್ದ.

ಬಹು ಪುರಾತನ ಕಾಲದಿಂದಲೂ ಹಿಮಾಲಯದ ತಪ್ಪಲಿನಲ್ಲಿ, ಅಸ್ಸಾಂ, ಮ್ಯಾನ್ಮಾರ್, ದಕ್ಷಿಣ ಚೀನಾ ಪ್ರದೇಶದಲ್ಲಿ ಲಿಂಬೆ ತನ್ನಷ್ಟಕ್ಕೆ ತಾನೇ ಬೆಳೆಯುತ್ತಿತ್ತು. ಇದು ಎಷ್ಟು ಪುರಾತನ ಕಾಲ ಎಂದರೆ, ಹಲವು ಲಕ್ಷ ವರ್ಷಗಳ ಹಿಂದೆ ಎಂದು ವಿಜ್ಞಾನಿಗಳು ಗುರುತಿಸಿದ್ದಾರೆ. ಹುಳಿ ಕಿತ್ತಳೆ/ ಕಾಡು ಕಿತ್ತಳೆ (ಬಿಟ್ಟರ್ ಆರೆಂಜ್) ಮತ್ತು ಸಿಟ್ರಾನ್ (ಕಾಡು ಲಿಂಬೆ) ಗಿಡಗಳ ಸಂಕರದಿಂದ ಲಿಂಬೆಯ ತಳಿಗಳು ಉತ್ಪನ್ನಗೊಂಡವು. ನಿಸರ್ಗದಲ್ಲೇ ಈ ಸಂಕರ ನಡೆದು, ಲಿಂಬೆ ಮತ್ತು ಇತರ ಹಲವು ಸಿಟ್ರಸ್ ತಳಿಗಳು ರೂಪುಗೊಂಡವು. ಆಯುರ್ವೇದ ಔಷಧ ಪದ್ಧತಿಯಲ್ಲಿ ಲಿಂಬೆ ರಸದ ವ್ಯಾಪಕ ಬಳಕೆಯನ್ನು ಗಮನಿಸಿದರೆ, ಲಿಂಬೆಯ ಔಷಧಿಯ ಗುಣಗಳನ್ನು ನಮ್ಮ ದೇಶದವರು ಸಾವಿರಾರು ವರ್ಷಗಳ ಮುಂಚೆಯೇ ಗುರುತಿಸಿದ್ದರು ಎನಿಸುತ್ತದೆ. ವಿಟಮಿನ್ ಸಿ ಹೇರಳವಾಗಿರುವ ಲಿಂಬೆಯು, ಹುಳಿ ಗುಣ ಹೊಂದಿದ್ದು, ನಾನಾ ರೀತಿಯಲ್ಲಿ ಬಳಕೆಯಾಗುತ್ತಿದೆ. ಔಷಧವಾಗಿ ಲಿಂಬೆ ರಸ ಪ್ರಮುಖವಾಗಿ ಬಳಕೆಯಾಗಿದೆ. ಹಾಲನ್ನು ಮೊಸರು ಮಾಡಲು ಈಗಲೂ ಲಿಂಬೆರಸವನ್ನು ಬಳಸುವ ಪುರಾತನ ಪದ್ಧತಿಯು ಅಲ್ಲಲ್ಲಿ ಮುಂದುವರಿದಿದೆ!

ಲಿಂಬೆಯ ಜತೆಯಲ್ಲೇ, ಹಲವು ಸಿಟ್ರಸ್ ಪ್ರಭೇದಗಳನ್ನು ಗುರುತಿಸಬಹುದು. ಕಿತ್ತಳೆ, ಗಜನಿಂಬೆ, ಎಳ್ಳಿ, ದುಡ್ಲಿ, ಮುಸುಂಬಿ, ಸಿಹಿ ಕಂಚಿ, ಕಹಿ ಕಂಚಿ, ಚಕ್ಕೋತ, ಕಿಮೋ – ಈ ರೀತಿ ನಾನಾ ರೀತಿಯ ಸಿಟ್ರಸ್ ತಳಿಗಳು ಪುರಾತನ ಕಾಲದಿಂದಲೇ ಮನುಷ್ಯನಿಗೆ ಪರಿಚಿತ. ಜಗತ್ತಿನ ಎಲ್ಲಾ ಸಿಟ್ರಸ್ ಪ್ರಭೇದದ ಹಣ್ಣುಗಳಿಗೆ ನಮ್ಮ ದೇಶದ ಹಿಮಾಲಯದ ತಪ್ಪಲಿನಲ್ಲಿದ್ದ ತಳಿಗಳೇ ತಂದೆ ತಾಯಿ ಇದ್ದಂತೆ ಎಂಬ ವಿಚಾರವೇ ವಿಸ್ಮಯ ಹುಟ್ಟಿಸುವಂತಹದ್ದು.

ನಮ್ಮ ಪಶ್ಚಿಮ ಘಟ್ಟಗಳಲ್ಲಿ ಅಲ್ಲಲ್ಲಿ ಕಾಡುಗಳಲ್ಲಿ ಕಾಣಸಿಗುವ ಕಾಡು ಕಿತ್ತಳೆ ತಳಿಗಳು, ಪುರಾತನ ಸಿಟ್ರಸ್ ಪ್ರಭೇದಗಳೇ ಇರಬೇಕು. (ಈ ಕುರಿತು ಸಂಶೋಧನೆ ಅಗತ್ಯವಿದೆ). ನಾಯಿ ಕಿತ್ತಳೆ, ಇಳ್ಳಿ ಹಣ್ಣು, ಚಿಟ್ಟ ಕಿತ್ತಳೆ ಮೊದಲಾದ ಹೆಸರುಗಳಿಂದ ಇವು ಸುಳ್ಯ, ಸಿರ್ಸಿ, ಸಾಗರ, ಚಿಕ್ಕಮಗಳೂರು ಮೊದಲಾದ ಕಡೆ ಮೊದಲಿನಿಂದಲೂ ಪರಿಚಿತ. ಸಿಹಿ ಕಿತ್ತಳೆ ಗಿಡಗಳನ್ನು ಕಸಿ ಮಾಡಲು ಕಾಡು ಕಿತ್ತಳೆ ಗಿಡಗಳ ಕಾಂಡವನ್ನು ಬಳಸುವುದುಂಟು. ಸಿಹಿ ಕಿತ್ತಳೆ ಹಣ್ಣಿನಲ್ಲಿ ನಾಲ್ಕಾರು ಬೀಜಗಳು ಕಂಡುಬಂದರೆ, ಕಾಡು ಕಿತ್ತಳೆಯಲ್ಲಿ ಹತ್ತಾರು ಅಥವಾ ಇನ್ನೂ ಜಾಸ್ತಿ ಬೀಜಗಳಿರುತ್ತವೆ ಮತ್ತು ಸಾಮಾನ್ಯವಾಗಿ ಇವು ಹುಳಿ; ಗಾತ್ರದಲ್ಲೂ ಚಿಕ್ಕವು. ಆದರೆ, ಒಂದು ಕಾಡು ಕಿತ್ತಳೆ ಮರದಲ್ಲಿ ವರ್ಷಕ್ಕೆ ಐನೂರಕ್ಕೂ ಹೆಚ್ಚು ಹಣ್ಣುಗಳಾಗುವುದನ್ನು ಗುರುತಿಸಲಾಗಿದೆ.

ಹಲವು ಸಿಟ್ರಸ್ ತಳಿಯ ಹಣ್ಣುಗಳು ನಮ್ಮಲ್ಲಿ ಬೆಳೆಯುತ್ತವೆ. ಬಯಲು ಸೀಮೆಯಲ್ಲಿ ಕಾಣಸಿಗುವ ಇಳ್ಳಿ ಹಣ್ಣು ಸಿಟ್ರಸ್ ಗುಂಪಿಗೆ ಸೇರಿದ ಸಸ್ಯ; ಆದರೆ ಇದರಿಂದ ಜ್ಯೂಸ್ ತಯಾರಿಸಲು ಮಾತ್ರ ಸಾಧ್ಯ. ಆದರೆ, ಶಿರಸಿ ಪ್ರದೇಶದಲ್ಲಿ ಇಳ್ಳಿ ಹಣ್ಣು ಎಂದರೆ ಕಾಡು ಕಿತ್ತಳೆ. ಮಲೆನಾಡಿನ ಕೆಲವು ಪ್ರದೇಶಗಳಲ್ಲಿ ಸಿಹಿ ಕಂಚಿ ಮತ್ತು ಕಹಿ ಕಂಚಿ ಎಂಬ ಎರಡು ಪ್ರಭೇದದ ಸಿಟ್ರಸ್ ಮರಗಳು ಕಾಣ ಸಿಗುತ್ತವೆ. ಇವುಗಳ ದೊಡ್ಡ ಗಾತ್ರದ ಹಣ್ಣುಗಳ ತೊಳೆಗಳನ್ನು ಉಪ್ಪು, ಮೆಣಸು ಬೆರೆಸಿ ತಿನ್ನಲು ಬಲು ರುಚಿ!

ಸಿಟ್ರಸ್ ಪ್ರಭೇದದ ಮೂಲವು ನಮ್ಮ ದೇಶ ಮತ್ತು ದಕ್ಷಿಣ ಏಷ್ಯಾವೇ ಆದರೂ, ಇಂದು ವಿದೇಶಗಳಲ್ಲಿ ಇವುಗಳ ವಿವಿಧ ತಳಿಗಳ ಅಭಿವೃದ್ಧಿ ಆಗಿದೆ. ಈ ರೀತಿ ಬೇರೆ ದೇಶಗಳಲ್ಲಿ ಅಭಿವೃದ್ಧಿ ಹೊಂದಿ, ಅಲ್ಲಿನ ಅಧಿಕೃತ ಹಣ್ಣು ಎಂದೇ ಗುರುತಿಸಲ್ಪಡುತ್ತಿರುವ ಹಣ್ಣುಗಳಲ್ಲಿ ಮೂಸಂಬಿ ಪ್ರಮುಖ. ಮೂಸಂಬಿ ಹಣ್ಣು ಮೂಲತಃ ನಮ್ಮ ದೇಶದ ಸಿಟ್ರಸ್ ಪ್ರಭೇದಗಳಿಂದ ರೂಪುಗೊಂಡ ಹಣ್ಣು. ಆದರೆ, ಇಂದು ಅಧಿಕೃತ ಮಾಹಿತಿಯನ್ನು ಗಮನಿಸಿದರೆ, ಮೂಸಂಬಿಯು ಇರಾನಿನ ದಕ್ಷಿಣ ಭಾಗದ ಹಣ್ಣು ಎಂದು ಪರಿಚಯಗೊಳ್ಳುತ್ತಿದೆ! ಅದಕ್ಕೆ ಕಾರಣವಿದೆ. ಮೂಸಂಬಿಯು, ಹುಳಿ ಕಿತ್ತಳೆ (ಸಿಟ್ರಸ್ ಆರೆಂಟಿಯಮ್) ಮತ್ತು ಕಾಡು ಲಿಂಬೆ /ಗಜ ಲಿಂಬೆ (ಸಿಟ್ರಸ್ ಮೆಡಿಕಾ) ಸಸ್ಯಗಳ ಸಂಕರದಿಂದ ರೂಪುಗೊಂಡ ಹಣ್ಣು. ಸಿಟ್ರಸ್ ಮೆಡಿಕಾದ ಮೂಲವು ಹಿಮಾಲಯದ ತಪ್ಪಲು; ಹುಳಿ ಕಿತ್ತಳೆ ಸಹ ಭಾರತ ಮೂಲದ್ದು. ಇವೆರಡನ್ನೂ ಸಂಕರಗೊಳಿಸಿ, ಮೂಸಂಬಿ ಎಂಬ ಹಣ್ಣನ್ನು ಉತ್ಪಾದಿಸಿದ ಕೀರ್ತಿ ಇರಾನ್‌ಗೆ ಸಂದಿದೆ!

ಮೂಸಂಬಿಯ ವಿಭಿನ್ನ ತಳಿಯು ಮೊಸಾಂಬಿಕ್ ದೇಶದಲ್ಲಿ ರೂಪುಗೊಂಡಿದ್ದು, ಇದನ್ನು ಪೋರ್ಚುಗೀಸರು ಭಾರತಕ್ಕೆ ತಂದರು. ಮೂಸಂಬಿ ಎಂಬ ಪದವು ಇರಾನ್ ಮತ್ತು ಮೊಸಾಂಬಿಕ್ ಪದಗಳಿಂದ ಬಂದಿದೆ ಎನ್ನಲಾದೆ. ಮುಸಂಬಿಯ ವಿಶೇಷವೆಂದರೆ, ಇದನ್ನು ಸೇವಿಸುವದರಿಂದ ಆರೋಗ್ಯ ಉತ್ತಮಗೊಳ್ಳುತ್ತದೆ ಮತ್ತು ಇರಾನ್ ದೇಶದಲ್ಲಿ ನೆಗಡಿ ಜ್ವರವಾದಾಗ ಇದರ ರಸವನ್ನು ನಾಟಿ ಔಷಧವಾಗಿ ಉಪಯೋಗಿಸುವರು! ಅಂತಹ ಔಷಧಿಯ ಗುಣಗಳು ಈ ಹಣ್ಣಿಗೆ ಇರುವುದಂತೂ ನಿಜ. ನಮ್ಮ ದೇಶದಲ್ಲಿ ಇಂದು ದೊರೆಯುವ ಅತ್ಯುತ್ತಮ ಹಣ್ಣುಗಳ ಪೈಕಿ (ನಮ್ಮ ಆರೋಗ್ಯ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ) ಮೂಸಂಬಿಯೇ ಅಗ್ರಗಣ್ಯ ಎನ್ನಬಹುದು.

ಕಿತ್ತಳೆಯು ನಮ್ಮ ರಾಜ್ಯದವರಿಗೆ ಕೊಡಗಿನ ಕಿತ್ತಳೆ ಎಂದೇ ಪರಿಚಿತ. ಕೆಲವು ದಶಕಗಳ ಹಿಂದೆ ಕೊಡಗಿನ ಕಿತ್ತಳೆ ಮರಗಳಿಗೆ ರೋಗವೊಂದು ಬಂದು, ಹಲವು ಮರಗಳು ನಾಶವಾದವು. ನಾಗಪುರದ ಕಿತ್ತಳೆಯು ಗಾತ್ರದಲ್ಲಿ ದೊಡ್ಡದಗಿದ್ದು, ಸಿಪ್ಪೆ ತೆಗೆಯಲು ಸುಲಭವಾಗಿದ್ದರಿಂದ, ಅದು ಇಂದು ಹೆಚ್ಚು ಜನಪ್ರಿಯ.

ಈ ಬರಹದ ಆರಂಭದಲ್ಲಿ, ಡಾ. ನಾ. ಸೋಮೇಶ್ವರರ ಪ್ರಸ್ತಾಪವಿದೆ; ಅವರು, ತಮ್ಮ ಅದೇ ಲೇಖನದ ಕೊನೆಯಲ್ಲಿ, ಎಲ್ಲರಿಗೂ ಒಂದು ಸಲಹೆ ಕೊಡುತ್ತಾರೆ : ಪ್ರಸ್ತುತ ಜಂಕ್-ಡ್ ವ್ಯಾಮೋಹಕ್ಕೆ ಬಲಿಯಾಗಿರುವ ನಮ್ಮ ಯುವಜನತೆಯು ಸಬ್-ಕ್ಲಿನಿಕಲ್ ವಿಟಮಿನ್-ಸಿ ಡೆಫಿಶಿಯನ್ಸಿಗೆ ತುತ್ತಾಗಿದೆ. ಇದು ಅತ್ಯಂತ ವಿಷಾದನೀಯ. ಹಾಗಾಗಿ ಮನೆಯಲ್ಲಿರುವ ಪ್ರತಿಯೊಬ್ಬರೂ ದಿನಕ್ಕೆ ಒಂದು ಹುಳಿಹಣ್ಣನ್ನು ತಿನ್ನುವ ಪ್ರತಿಜ್ಞೆಯನ್ನು ಕೈಗೊಳ್ಳೋಣ. ಡಾ. ಸೋಮೇಶ್ವರ ಅವರು ನೀಡಿರುವ, ಅತ್ಯಂತ ಪ್ರಾಯೋಗಿಕವಾಗಿರುವ ಈ ಸಲಹೆ ಮಾತುಗಳನ್ನು ಸುವರ್ಣಾಕ್ಷರದಲ್ಲಿ ಬರೆಸಿಟ್ಟು, ಪ್ರತಿ ಮನೆಯಲ್ಲಿ ಪ್ರದರ್ಶಿಸಬೇಕು! ನಮ್ಮ ಯುವಜನತೆ ವಿಟಮಿನ್ ಸಿ ಡೆಫಿಶಿಯನ್ಸಿಗೆ ಗುರಿಯಾಗಿರುವ ವಿಚಾರ ಆತಂಕಕಾರಿ; ಇದಕ್ಕೆ ಸರಳ ಪರಿಹಾರವಾಗಿ, ನಮ್ಮಲ್ಲಿ ಹೇರಳವಾಗಿ ಲಭ್ಯವಿರುವ ಸಿಟ್ರಸ್ ಹಣ್ಣುಗಳನ್ನು (ಲಿಂಬೆ, ಮೂಸಂಬಿ, ಕಿತ್ತಳೆ ಇತ್ಯಾದಿ) ಉಪಯೋಗಿಸಬಹುದು. ಯುವಜನತೆಯ ಜತೆಗೇ, ಮನೆಯ ಎಲ್ಲರೂ ದಿನಕ್ಕೆ ಸ್ವಲ್ಪವಾದರೂ ಸಿಟ್ರಸ್ ರಸವನ್ನು ಅಥವಾ ಹಣ್ಣುಗಳನ್ನು ಸೇವಿಸೋಣ. ಈ ನಿಟ್ಟಿನಲ್ಲಿ, ನಮ್ಮ ದಿನನಿತ್ಯದ ಆಹಾರದ ಜತೆ ಲಿ

ಪೌರಕಾರ್ಮಿಕರನ್ನು ಶೋಷಣೆ ಮಾಡಬೇಡಿ: ಪಿ.ರಘು

ಹೊರಗುತ್ತಿಗೆ ಮತ್ತು ಖಾಯಂ ಪೌರಕಾರ್ಮಿಕರಿಗೆ ಅಧಿಕಾರಿಗಳು ತಾರತಮ್ಯ ಬೇಡ | ಸಮಸ್ಯೆಗಳಿಗೆ ನ್ಯಾಯ ಕೊಡಿಸುವ ಪ್ರಯತ್ನ

• ಪ್ರಜೋದಯ ವರದಿ

ಹಾಸನ: ಜಿಲ್ಲೆಯ ಸ್ವಚ್ಛತೆಯ ಸೇನಾನಿಗಳು ಮಳೆ ಚಳಿ, ಗಾಳಿಯನ್ನು ಲೆಕ್ಕಿಸದೆ ಮನೆ ಮತ ಮಕ್ಕಳನ್ನು ಬಿಟ್ಟು ನಗರವನ್ನು ಸ್ವಚ್ಛತೆಗೊಳಿಸಿ ಜಿಲ್ಲೆಯ ಜನರು ಉತ್ತಮವಾದ ಜೀವನವನ್ನು ನಡೆಸಲು ಕಾರಣೀಭೂತರಾದ ನಮ್ಮ ಪೌರಕಾರ್ಮಿಕರು ಯಾವುದೇ ರೀತಿಯ ಶೋಷಣೆ ಮಾಡಬಾರದು ಎಂದು ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಪಿ.ರಘು ಅವರು ತಿಳಿಸಿದ್ದಾರೆ.

ನಗರದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿಂದು ಆಯೋಜಿಸಿದ್ದ ಹಾಸನ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳು, ಗ್ರಾಮೀಣ ಸಂಸ್ಥೆಗಳು ಮತ್ತು ಇತರೆ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಸ್ವಚ್ಛತೆ ಕಾರ್ಮಿಕರು ಹಾಗೂ ಪೌರಕಾರ್ಮಿಕರಿಗೆ ಸಂಬಧಿಸಿದಂತೆ ನೇರ ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪೌರಕಾರ್ಮಿಕರು ತಮ್ಮ ಸಮಸ್ಯೆಗಳು ತಿಳಿಸಿದರೆ ಆಯೋಗವು ತನ್ನಲ್ಲಿರುವ ಶಕ್ತಿಯನ್ನು ಉಪಯೋಗಿಸಿಕೊಂಡು ನ್ಯಾಯ ಕೊಡಿಸುವ ಪ್ರಯತ್ನ ಪಡುತ್ತದೆ ಎಂದು ತಿಳಿಸಿದರು.

ನಗರದಲ್ಲಿ ಹೊರಗುತ್ತಿಗೆ ಪೌರಕಾರ್ಮಿಕರಿಗೆ ಮತ್ತು ಖಾಯಂ ಪೌರಕಾರ್ಮಿಕರಿಗೆ ಅಧಿಕಾರಿಗಳು ತಾರತಮ್ಯ ಮಾಡದೇ ಸುರಕ್ಷತಾ ಪರಿಕರಗಳಾದ ಬೂಟು, ಗ್ಲಾವ್ಸ್, ಎರಡು ಜೊತೆ ಸಮವಸ್ತ್ರ, ವರ್ಷಕ್ಕೆ ಮೂರು ಬಾರಿ ಆರೋಗ್ಯ ತಪಾಸಣೆಯನ್ನು ಕಡ್ಡಾಯ ವಾಗಿ ಮಾಡಿಸಬೇಕು ಹಾಗೂ ಉತ್ತಮವಾದ ಊಟ ತಿಂಡಿ ವ್ಯವಸ್ಥೆಯನ್ನು ನೀಡಬೇಕು. ಪೌರಕಾರ್ಮಿಕರು ಯಾವುದೇ ಭಯವಿಲ್ಲದೆ ಮುಕ್ತವಾಗಿ ತಮ್ಮ ಮೂಲಭೂತ ಸಮಸ್ಯೆಗಳನ್ನು ತಿಳಿಸಿದರೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಮಾತನಾಡಿ, ಹಂತ ಹಂತವಾಗಿ ಪರಿಹಾರ ಒದಗಿಸಿಕೊಡುತ್ತೇವೆ ಎಂದು ತಿಳಿಸಿದರು.

ಪ್ರತಿ ತಿಂಗಳು ಸಂಬಳ ಆದ ನಂತರ ಸ್ಯಾಲರಿ ಸ್ಲಿಪ್‌ಗಳನ್ನು ಪ್ರತಿ ಪೌರಕಾರ್ಮಿಕರಿಗೂ ಕಡ್ಡಾಯವಾಗಿ ನೀಡಬೇಕು ಜೊತೆಗೆ ಏಜೆನ್ಸಿ ಅವರು ಪೌರಕಾರ್ಮಿಕರ ಕ್ರಮದ ಬಗ್ಗೆ ಕಡ್ಡಾಯವಾಗಿ ದಾಖಲಾತಿಯನ್ನು ಆಯೋಗಕ್ಕೆ ನೀಡಬೇಕು. ಪೌರ ಕಾರ್ಮಿಕರಿಗೆ ಇ.ಎಸ್. ಐ. ಹಾಗೂ ಪಿ.ಎಫ್ ಹಣದ ಬಗ್ಗೆ ಮಾಹಿತಿ ನೀಡುವುದರ ಜೊತೆಗೆ ಯಾವುದೇ ಹಣವನ್ನು ತಡೆ ಹಿಡಿಯದಂತೆ ನೇರವಾಗಿ ಖಾತೆಗೆ ಹಾಕಬೇಕು ಎಂದರಲ್ಲದೆ, ಹೊರ ಗುತ್ತಿಗೆ ನೌಕರರು ಹಾಗೂ ಖಾಯಂ ನೌಕರರು ಯಾವುದೇ ತೊಂದರೆ ಉಂಟಾದಲ್ಲಿ ಸಂಬಂಧ ಪಟ್ಟ ಅಧಿಕಾರಿಗಳ ಗಮನಕ್ಕೆ ನೇರವಾಗಿ ಸಮಸ್ಯೆಯನ್ನು ತಿಳಿಸಿ ಪರಿಹಾರ ಪಡೆದು ಕೊಳ್ಳಬೇಕು ಎಂದು ಹೇಳಿದರು.

ಪೌರ ಕಾರ್ಮಿಕರಿಗೆ ವಿಶ್ರಾಂತಿ ಕೊಠಡಿಯನ್ನು ನಿರ್ಮಿಸಬೇಕು ಹಾಗೂ ಮುಖ್ಯವಾಗಿ ಸ್ವಚ್ಛತೆ ಪರಿಕಾರಗಳಿಲ್ಲದೆ ಯಾವುದೇ ನೌಕರರು ಕೆಲಸವನ್ನು ಮಾಡಬಾರದು. ಸರ್ಕಾರದಿಂದ ವಸತಿಗಳನ್ನು ನೀಡಿದ್ದು ಯಾವ ಫಲಾನುಭವಿಗಳು ವಾಸವಿರುವುದಿಲ್ಲವೋ ಅಂತಹವರಿಗೆ ಮೂರು ಬಾರಿ ನೋಟಿಸ್ ನೀಡಿ ನಂತರ ಅರ್ಹ ಪೌರಕಾರ್ಮಿಕರಿಗೆ ಆ ಮನೆಗಳನ್ನು ನೀಡಬೇಕು ವಸತಿ ನೀಡುವುದರ ಜೊತೆಗೆ ಹಕ್ಕು ಪತ್ರ ನೀಡಬೇಕು ಪ್ರತಿಯೊಬ್ಬ ಪೌರ ಕಾರ್ಮಿಕರಿಗೂ ವಸತಿ ಗೃಹಗಳನ್ನು ನಿರ್ಮಿಸಿ ಕೊಳ್ಳುವಂತೆ ಭೂಮಿ ಹಾಗೂ ಹಣವನ್ನು ನೀಡಬೇಕು ಎಂದು ತಿಳಿಸಿದರು.

ಅರಸೀಕೆರೆಯಲ್ಲಿನ ಪೌರಕಾರ್ಮಿಕರಿಗೆ ನೇರ ನೇಮಕಾತಿ ಮಾಡಿಕೊಳ್ಳಲು ಅವಕಾಶ ವಿದ್ದರೆ ಹೊರಗುತ್ತಿಗೆ ನೌಕರರನ್ನು ನೇರ ನೇಮಕಾತಿ ಮಾಡಿಕೊಳ್ಳಬೇಕು. ಯಾವುದೇ ಪೌರ ಕಾರ್ಮಿಕರು ತಮ್ಮ ಕುಂದು -ಕೊರತೆಯನ್ನು ಹೇಳುಕೊಳ್ಳುವುದಕ್ಕೆ ಯಾವುದೇ ಅಡೆತಡೆಗಳು ಇರುವುದಿಲ್ಲ ಕಾರ್ಮಿಕರ ಕಷ್ಟವನ್ನು ತಿಳಿದು ಪರಿಹಾರ ನೀಡುವುದು ಅಧಿಕಾರಿಗಳ ಜವಾಬ್ದಾರಿಯಾಗಿದ್ದು ಖಾಯಂ ಪೌರಕಾರ್ಮಿಕರಿಗೆ ಉತ್ತಮವಾದ ಗೃಹ ನಿರ್ಮಿಸಿಕೊಳ್ಳಲು ಹಣ ಬಿಡುಗಡೆ ಮಾಡುತ್ತೇವೆ ಎಂದರು.

ಸಕಲೇಶಪುರ ಪೌರ ಕಾರ್ಮಿಕರಿಗೆ ತಮ್ಮ ಸಮುದಾಯಕ್ಕೆ ರುದ್ರಭೂಮಿಯನ್ನು ಕಲ್ಪಿಸುವುದಾಗಿ ಆಶ್ವಾಸನೆ ನೀಡಿದರು ಹಾಗೂ ಉತ್ತಮವಾದ ವಿಶ್ರಾಂತಿ ಕೊಠಡಿಗಳನ್ನು ನಿರ್ಮಾಣ ಮಾಡಿಕೊಳ್ಳಬೇಕು. ಪ್ರತಿಯೊಬ್ಬ ಪೌರ ಕಾರ್ಮಿಕ ಮಕ್ಕಳಿಗೆ ವಿದ್ಯಾಭ್ಯಾಸಕ್ಕಾಗಿ ಸ್ಕಾಲರ್ಶಿಪ್ ನೀಡುವ ಬಗ್ಗೆ ಪೋಷಕರಿಗೆ ಅಧಿಕಾರಿಗಳು ಮಾಹಿತಿ ನೀಡಬೇಕು, ನೇರ ಪಾವತಿಯಲ್ಲಿ ಇದ್ದು ಮರಣ ಹೊಂದಿದ ಪೌರಕಾರ್ಮಿಕರಿಗೆ ಆ ಕುಟುಂಬದ ಇತರೆ ಅರ್ಹ ವ್ಯಕ್ತಿಗಳಿಗೆ ಉದ್ಯೋಗ ಅವಕಾಶ ನೀಡಬೇಕು ಎಂದು ತಿಳಿಸಿದರು.

ಸಫಾಯಿ ಕರ್ಮಚಾರಿ ಆಯೋಗದ ಕಾರ್ಯದರ್ಶಿ ಸುನಾಯ, ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಚಂದ್ರಶೇಖರ್, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ರುದ್ರಮುನಿ, ಅಪ್ತ ಕಾರ್ಯದರ್ಶಿ ರಘು, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ದೂದ್ ಪೀರ್ ಹಾಗೂ ತಹಸೀಲ್ದಾರ್ ಗೀತಾ ಇನ್ನಿತರರು ಉಪಸ್ಥಿತರಿದ್ದರು.

ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ಸರ್ಕಾರಿ ಶಾಲೆಗಳಲ್ಲಿ ಇಂದಿನ ದಿನಮಾನಕ್ಕೆ ತಕ್ಕಂತೆ ತಂತ್ರಜ್ಞಾನದೊಂದಿಗೆ ಶಿಕ್ಷಣ ನೀಡುತ್ತಿದ್ದೇವೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಎಚ್.ಎಚ್.ಸತೀಶ್ ಹೇಳಿದರು.

ತಾಲ್ಲೂಕಿನ ಹಿರೀಸಾವೆ ಗ್ರಾಮದ ಪಿಎಂಶ್ರೀ ಶಾಸಕರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳ ಮನೆಯ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ಅಕ್ಷರ ಅಭ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಅಕ್ಷರ ಅಭ್ಯಾಸ ಎನ್ನುವುದು ನಮ್ಮ ಸಂಸ್ಕೃತಿಯಾಗಿದೆ ಎಂದರು.

ತಾಯಿ ಮಗುವಿಗೆ ಮೊದಲ ಗುರು, ಶಾಲೆಯಿಂದ ಮಕ್ಕಳು ಬಂದ ನಂತರ ದಿನನಿತ್ಯದ ಪಾಠ, ಮನೆ ಕೆಲಸದ (ಹೋಮ್ ವರ್ಕ್) ಬಗ್ಗೆ ಗಮನಹರಿಸಬೇಕು. ನಾನು ಇದೇ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಪಡೆದು ಇಂದು ಕ್ಷೇತ್ರ ಶಿಕ್ಷಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆನೆ, ಸರ್ಕಾರಿ ಶಾಲೆಗಳ ಬಗ್ಗೆ ಉತ್ತಮ ಅಭಿಪ್ರಾಯ ಇರಲಿ, ಈ ಶಾಲೆಗಳಲ್ಲಿ ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮದಲ್ಲಿಯೂ ಪಾಠಗಳ ಭೋದನೆ ಇದೆ ಎಂದು ತಿಳಿಸಿದರು.

ಶಿಕ್ಷಣ ಸಂಯೋಜಕ ಶ್ರೀನಿವಾಸ್, ಪಿಎಂಶ್ರೀ ಶಾಲೆಯ ನೋಡೆಲ್ ಅಧಿಕಾರಿ ಕರಿಯಪ್ಪಗೌಡ, ಶಾಲೆಯ ಮುಖ್ಯ ಶಿಕ್ಷಕಿ ಉಮಾದೇವರಾಜು, ಶಾಲೆಯ ಸಹ ಶಿಕ್ಷಕರು, ಎಸ್ ಡಿಎಂಸಿ ಸದಸ್ಯರು ವೇದಿಕೆಯಲ್ಲಿ ಇದ್ದರು. ಶಿವಕುಮಾರ್ ನೇತೃತ್ವದಲ್ಲಿ ಸರಸ್ವತಿ ಪೂಜೆಯೊಂದಿಗೆ ಅಕ್ಷರ ಅಭ್ಯಾಸದ ವಿಧಿವಿಧಾನಗಳು ಜರುಗಿದವು. ಎಲ್ ಕೆಜಿ, ಯುಕೆಜಿ ವಿದ್ಯಾರ್ಥಿಗಳು ಮತ್ತು ಪೋಷಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಮರುವನಹಳ್ಳಿ ಕೃಷ್ಣೇಗೌಡ ಪಿಎಸಿಸಿಎಸ್ ಅಧ್ಯಕ್ಷ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ತಾಲ್ಲೂಕಿನ ಬಾಗೂರು ಹೋಬಳಿ ಕೇಂದ್ರದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಸ್ಥಾನಕ್ಕೆ ಶನಿವಾರ ನಡೆದ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ಮರುವನಹಳ್ಳಿ ಕೃಷ್ಣೇಗೌಡ ಅವಿರೋಧವಾಗಿ ಆಯ್ಕೆಗೊಂಡರು.

ಈ ಹಿಂದೆ ಅಧ್ಯಕ್ಷರಾಗಿದ್ದ ಡಿ.ಎನ್. ನಾಗರಾಜ್ ರಾಜೀನಾಮೆ ನೀಡಿದ್ದರಿಂದ ತೆರವಾದ ಸ್ಥಾನಕ್ಕೆ ಚುನಾವಣೆ ನಡೆಯಿತು. ಅಧ್ಯಕ್ಷ ಸ್ಥಾನಕ್ಕೆ ಕೃಷ್ಣೇಗೌಡ ಹೊರತುಪಡಿಸಿ ಬೇರೆ ಯಾವ ಸದಸ್ಯರು ನಾಮಪತ್ರ ಸಲ್ಲಿಸದೆ ಇದ್ದುದ್ದರಿಂದ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ವಿಜಯೇಂದ್ರ ಘೋಷಿಸಿದರು.

ಅವಿರೋಧವಾಗಿ ಆಯ್ಕೆಗೊಂಡ ನೂತನ ಅಧ್ಯಕ್ಷ ಮರುವನಹಳ್ಳಿ ಕೃಷ್ಣೇಗೌಡ ಅವರನ್ನು ಶಾಸಕ ಸಿಎನ್ ಬಾಲಕೃಷ್ಣ ಹಾಗೂ ರಾಜ್ಯ ಸಹಕಾರ ಮಹಾಮಂಡಲದ ನಿರ್ದೇಶಕ ಸಿ.ಎನ್. ಪುಟ್ಟಸ್ವಾಮಿಗೌಡ ಅಭಿನಂದಿಸಿದರು.

ಈ ಸಂದರ್ಭದಲ್ಲಿ ಶಾಸಕ ಸಿಎನ್ ಬಾಲಕೃಷ್ಣ ಮಾತನಾಡಿ ಸಹಕಾರ ಕ್ಷೇತ್ರದಿಂದ ಮಾತ್ರ ರೈತರ ಉಳಿವು ಸಾಧ್ಯ, ಹಾಸನ ಜಿಲ್ಲಾ ಬ್ಯಾಂಕ್‌ನ ನೆರವಿನಿಂದ ಪ್ರಸ್ತುತ ಕೃಷಿಪತ್ತಿನಲ್ಲಿ ಸುಮಾರು 11 ಕೋಟಿ ರೂ.ಗಳನ್ನು ಶೂನ್ಯ ಬಡ್ಡಿಯಲ್ಲಿ ಸಾಲವನ್ನು ರೈತರಿಗೆ ಕೊಡಲಾಗಿದೆ. 4ಬಾರಿ ಸಾಲ ಮನ್ನಾ ಯೋಜನೆಯಿಂದ 12 ಕೋಟಿ ರೂ.ನಷ್ಟು ಸಾಲಮನ್ನಾ ಆಗಿದೆ ಸಂಘದ ಬೆಳವಣಿಗೆಗೆ ಎಲ್ಲಾ ಸದಸ್ಯರ ಸಹಕಾರ ಮುಖ್ಯವಾಗಿದೆ ಎಂದರು.

ರಾಜ್ಯ ಸಹಕಾರ ಮಹಾಮಂಡಲದ ನಿರ್ದೇಶಕ ಸಿ.ಎನ್.ಪುಟ್ಟಸ್ವಾಮಿಗೌಡ ಮಾತನಾಡಿ, ಸಂಘದ ಅಭಿವೃದ್ಧಿ ಕೆಲಸಗಳಿಗೆ ಮಹಾಮಂಡಲದ ವತಿಯಿಂದ ಸದಸ್ಯರ ಮನವಿ ಮೇರೆಗೆ ಮುಂಬರುವ ದಿನಗಳಲ್ಲಿ 5 ಲಕ್ಷ ರೂ. ಅನುದಾನ ಕೊಡುವುದಾಗಿಯೂ ಅವರು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಎಪಿಎಂಸಿ ಮಾಜಿ ಅಧ್ಯಕ್ಷರುಗಳಾದ ಬಿಎಚ್ ಶಿವಣ್ಣ, ಮೂಡನಹಳ್ಳಿ ಚಂದ್ರೇಗೌಡ, ಎಎನ್ ಮಂಜುನಾಥ್, ಸಂಘದ ಉಪಾಧ್ಯಕ್ಷ ಗಂಗಾಧರ್, ಉದ್ಯಮಿಗಳಾದ ಅಣತಿ ಯೋಗೀಶ್, ಬ್ಲೂಲೈನ್ ದೇವರಾಜ್, ಪಿಎಸ್‌ಐ ನವೀನ್, ಸಂಘದ ನಿರ್ದೇಶಕರಾದ ಬಿ.ವಿ.ರಂಗಪ್ಪ, ಬಿ.ವಿ.ಸುರೇಶ್, ಅನ್ನಪೂರ್ಣ, ಚನ್ನಕೇಶವಗೌಡ ಇದ್ದರು.

ಮತದಾರರ ಪಟ್ಟಿಯಲ್ಲಿರುವುದು ಪ್ರತಿಯೊಬ್ಬರ ಹಕ್ಕು-ಕರ್ತವ್ಯ

ಜಿ.ಆರ್.ಹರೀಶ್ | ಎಸ್‌ಐಆರ್ ಅರಿವು ಜನಜಾಗೃತಿ ಜಾಥಾಗೆ ಚಾಲನೆ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ಪ್ರತಿಯೊಬ್ಬ ಅರ್ಹ ನಾಗರಿಕನೂ ಮತದಾರರ ಪಟ್ಟಿಯಲ್ಲಿ ತನ್ನ ಹೆಸರು ನೋಂದಾಯಿಸಿಕೊಳ್ಳುವುದು ಮೂಲಭೂತ ಹಕ್ಕು ಮತ್ತು ಕರ್ತವ್ಯವಾಗಿದೆ ಎಂದು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಜಿ.ಆರ್.ಹರೀಶ್ ಹೇಳಿದರು.

ಪಟ್ಟಣದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್ ನಿಲ್ದಾಣದಲ್ಲಿ ಶನಿವಾರ ತಾಲ್ಲೂಕು ಆಡಳಿತ, ತಾಲ್ಲೂಕು ಪಂಚಾಯಿತಿ, ತಾಲ್ಲೂಕು ಸ್ವೀಪ್ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ಎಸ್‌ಐಆರ್ ಅರಿವು ಜನಜಾಗೃತಿ ಜಾಥಾಗೆ ಚಾಲನೆ ನೀಡಿ ಮಾತನಾಡಿದ ಅವರು, ಮತದಾರರ ಪಟ್ಟಿ ಪರಿಷ್ಕರಣೆ-2026ರ ಕುರಿತು ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸುವ ಮೂಲಕ, ಪ್ರಜಾಪ್ರಭುತ್ವದ ಅಡಿಪಾಯವನ್ನು ಮತ್ತಷ್ಟು ಗಟ್ಟಿಗೊಳಿಸುವುದು ಈ ಅಭಿಯಾನದ ಮುಖ್ಯ ಉದ್ದೇಶವಾಗಿದೆ ಎಂದರು.

ಚುನಾವಣಾ ಆಯೋಗದ ನಿರ್ದೇಶನದಂತೆ ಮತದಾರರ ಪಟ್ಟಿಯ ಸಮಗ್ರ ವಿಶೇಷ ಪರಿಷ್ಕರಣೆ (ಎಸ್ ಐಆರ್) ರಾಜ್ಯದಾದ್ಯಂತ ಜೂ.30 ರಿಂದ ಪ್ರಾರಂಭಗೊಂಡಿದ್ದು, ಮತ ಗಟ್ಟೆ ಮಟ್ಟದ ಅಧಿಕಾರಿ (ಬಿಎಲ್‌ಒ) ಗಳು ಮನೆ ಮನೆಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಲಿದ್ದಾರೆ ಪ್ರಜಾಪ್ರಭುತ್ವದ ಯಶಸ್ಸು ಮತದಾರರ ಸಕ್ರಿಯ ಭಾಗವಹಿಸುವಿಕೆಯ ಮೇಲೆ ಅವಲಂಬಿತವಾಗಿದೆ ಎಂದು ತಿಳಿಸಿದರು.

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ-2026 ಅಭಿಯಾನವು ಪ್ರತಿಯೊಬ್ಬ ಅರ್ಹ ನಾಗರಿಕನೂ ಮತದಾರರ ಪಟ್ಟಿಯಲ್ಲಿ ತನ್ನ ಹೆಸರನ್ನು ನೋಂದಾಯಿಸಿಕೊಳ್ಳಲು ಮತ್ತು ಅಗತ್ಯವಿದ್ದಲ್ಲಿ ತಿದ್ದುಪಡಿ ಮಾಡಿಕೊಳ್ಳಲು ಒಂದು ಸುಸಂದರ್ಭವಾಗಿದೆ. ತಾಲ್ಲೂಕಿನ ಪ್ರತಿಯೊಬ್ಬ ನಾಗರಿಕನು ಈ ಪ್ರಕ್ರಿಯೆಯಲ್ಲಿ ಭಾಗಿಯಾಗಿ, ಜವಾಬ್ದಾರಿಯುತ ಮತದಾರರಾಗಬೇಕು ಎಂದು ಕರೆ ನೀಡಿದರು.

ಬಿಎಲ್‌ಒಗಳು ಮನೆಗೆ ಭೇಟಿ ನೀಡಿದಾಗ ಮತದಾರರ ವಿವಿರಗಳನ್ನು ಪರಿಶೀಲಿಸಲಿದ್ದಾರೆ. ಇವರಿಗೆ ಮಾಹಿತಿ ನೀಡಿ. ಮತದಾರರ ಪಟ್ಟಿಯಲ್ಲಿರುವ ಹೆಸರು ಪರಿಶೀಲನೆ, ತಿದ್ದುಪಡಿ, ಹೊಸ ಮತದಾರರ ಹೆಸರು ಸೇರ್ಪಡೆ, ಮೃತಪಟ್ಟವರು ಹಾಗೂ ಸ್ಥಳಾಂತರಗೊಂಡವರ ಹೆಸರು ಪಟ್ಟಿಯಿಂದ ತೆಗೆದುಹಾಕುವ ಪ್ರಕ್ರಿಯೆಯೂ ಇದೇ ಅವಧಿಯಲ್ಲಿ ನಡೆಯಲಿದೆ. ಗುರುತಿನ ಚೀಟಿಯಲ್ಲಿ ದೋಷಗಳು ಕಂಡು ಬಂದಲ್ಲಿ ತಿದ್ದುಪಡಿಗೆ ಅವಕಾಶವಿದೆ ಮಾಹಿತಿ ನೀಡಿದರಲ್ಲದೆ, ಎಲ್ಲಾ ಅರ್ಹ ನಾಗರಿಕರನ್ನು ಮತದಾರರ ಪಟ್ಟಿಯಲ್ಲಿ ಸೇರ್ಪಡೆಗೊಳಿಸುವುದು ಎಸ್ ಐಆರ್ ಉದ್ದೇಶ. ಪಟ್ಟಿ ಪರಿಷ್ಕರಣೆ ಸಮಯಲ್ಲಿ ನಿಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ಇರುವುದನ್ನು ಪರಿಶೀಲಿಸಬಹುದು ಎಂದರು.

ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣದಲ್ಲಿ ಎಸ್‌ಐಆರ್ ಕುರಿತಂತೆ ಬಿಟಿ ಮಾನವ ಕಲಾತಂಡದ ಕಲಾವಿದರು ನಾಟಕ ಪ್ರದರ್ಶಿಸಿ ಅರಿವು ಮೂಡಿಸಿದರು. ತಾಲ್ಲೂಕು ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿ ಉತ್ಸಾಹದಿಂದ ಜನ ಜಾಗೃತಿ ಜಾಥಾದಲ್ಲಿ ಪಾಲ್ಗೊಂಡರು. ಜಾಥಾದ ಉದ್ದಕ್ಕೂ ಮತದಾರರ ಪಟ್ಟಿಗೆ ಹೆಸರು ನೋಂದಾಯಿಸುವ, ತಿದ್ದುಪಡಿ ಮಾಡುವ ಹಾಗೂ ಪಟ್ಟಿಯಿಂದ ಹೆಸರು ಪರಿಶೀಲಿಸಿಕೊಳ್ಳುವ ಕುರಿತು ಸಾರ್ವಜನಿಕರಿಗೆ ಮಾಹಿತಿ ನೀಡಲಾಯಿತು.

ಚುನಾವಣಾ ಶಿರಸ್ತೆದಾರ್ ಎನ್. ಅನಿಲ್, ಕ್ಷೇತ್ರ ಶಿಕ್ಷಣಾಧಿಕಾರಿ ಎಚ್. ಹೆಚ್.ಸತೀಶ್, ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ ಕೆ.ಎನ್.ಅನಿಲ್, ಸಿಡಿಪಿಓ ದಿನೇಶ್, ಅಕ್ಷರ ದಾಸೋಹ ಉಪನಿರ್ದೇಶಕ ಉಮಾಶಂಕರ್, ತಾಲ್ಲೂಕು ಪಂಚಾಯಿತಿ ಸಹಾಯಕ ನಿರ್ದೇಶಕ ಎನ್.ಗಿರೀಶ್, ಸಾರಿಗೆ ಸಂಸ್ಥೆಯ ಚನ್ನರಾಯಪಟ್ಟಣ ಘಟಕಾಧಿಕಾರಿ ಜ್ಞಾನೇಶ್, ಕೃಪಾಕರ್, ಉಪಸ್ಥಿತರಿದ್ದರು.

ಎ.ಐ. ತಂತ್ರಜ್ಞಾನದಿಂದ ವಿದ್ಯಾರ್ಥಿಗಳಲ್ಲಿ ಕ್ರಾಂತಿಕಾರಕ ಬದಲಾವಣೆ

ಐರಿಸ್ ಕೃತಕ ಬುದ್ಧಿಮತ್ತೆಯ ರೋಬೋಟ್ ಶಿಕ್ಷಕಿಯ ಅನಾವರಣ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ಕೃತಕ ಬುದ್ಧಿಮತ್ತೆಯ ತಂತ್ರಜ್ಞಾನವು ವಿದ್ಯಾರ್ಥಿಗಳ ಕಲಿಕಾ ವಿಧಾನದಲ್ಲಿ ಕ್ರಾಂತಿಕಾರಕ ಬದಲಾವಣೆ ತರಲಿದ್ದು, ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ನವೀನ ಶಿಕ್ಷಣದ ದಾರಿ ತೆರೆದಿಡಲಿದೆ ಎಂದು ನಾಗೇಶ್ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ.ಕೆ. ನಾಗೇಶ್ ಹೇಳಿದರು.

ಪಟ್ಟಣದ ಜ್ಞಾನಸಾಗರ ಅಂತಾರಾಷ್ಟ್ರೀಯ ಪಬ್ಲಿಕ್ ಶಾಲೆಯಲ್ಲಿ ನೂತನವಾಗಿ ಅಳವಡಿಸಿರುವ ಐರಿಸ್ ಕೃತಕ ಬುದ್ಧಿಮತ್ತೆಯ ರೋಬೋಟ್ ಶಿಕ್ಷಕಿಯ ಅನಾವರಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಶಿಕ್ಷಣ ವಲಯದಲ್ಲಿ ಕ್ರಾಂತಿ ಮೂಡಿಸುವ ಕಾಲ ಹತ್ತಿರವಾಗುತ್ತಿದೆ. ಮಾಹಿತಿ ತಂತ್ರಜ್ಞಾನದ ಹೊಸ ಹೊಸ ಆವಿಷ್ಕಾರದಲ್ಲಿ ಈಗ ಹೊಸ ಸೇರ್ಪಡೆ ಐರಿಸ್ ಕೃತಕ ಬುದ್ಧಿಮತ್ತೆ ಶಿಕ್ಷಕಿ ಆಗಿದ್ದು, ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಆಧಾರಿತ ಐರಿಸ್ ರೋಬೋಟ್ ಶಿಕ್ಷಕಿಯನ್ನು ಜಿಲ್ಲೆಯಲ್ಲೇ ಮೊಟ್ಟ ಮೊದಲು ನಮ್ಮ ಶಾಲೆಗೆ ಅಳವಡಿಸಲಾಗಿದ್ದು, ಇದು ಶಿಕ್ಷಣ ಕ್ಷೇತ್ರದಲ್ಲಿ ಮಹತ್ವದ ಮೈಲಿಗಲ್ಲಾಗಿದೆ. ಇಂತಹ ತಂತ್ರಜ್ಞಾನ ಸೌಲಭ್ಯಗಳು ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಚಿಂತನೆ ಹಾಗೂ ತಾಂತ್ರಿಕ ನೈಪುಣ್ಯವನ್ನು ವೃದ್ಧಿಸಲು ಸಹಕಾರಿಯಾಗ

ಜಾಗತಿಕ ಇಂಧನ ಬಿಕ್ಕಟ್ಟು ಎದುರಿಸಿದ್ದೇವೆ

ಭಾರತ ಇಂಧನ ಆಮದು ಗಮನಾರ್ಹವಾಗಿ ವಿಸ್ತರಿಸಿದೆ: ಪ್ರಧಾನಿ ನರೇಂದ್ರ ಮೋದಿ

• ಪ್ರಜೋದಯ ವರದಿ

ನವದೆಹಲಿ: ಪಶ್ಚಿಮ ಏಷ್ಯಾ ಸಂಘರ್ಷದಿಂದ ಉಂಟಾದ ಜಾಗತಿಕ ಇಂಧನ ಬಿಕ್ಕಟ್ಟಿನ ಪರಿಸ್ಥಿತಿಯನ್ನು ಭಾರತವು ಸಮರ್ಪಕವಾಗಿ ಎದುರಿಸಿದ್ದು, ನಾಗರಿಕರ ಮೇಲೆ ಹೆಚ್ಚಿನ ಹೊರೆಯಾಗದಂತೆ ಯಶಸ್ವಿಯಾಗಿ ನಿಭಾಯಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದರು.

ಬಲೋತ್ರಾ ಜಿಲ್ಲೆಯ ಪಚಪದ್ರಾದಲ್ಲಿ ಸಂಸ್ಕರಣಾಗಾರ ಸಂಕೀರ್ಣದ ಉದ್ಘಾಟನೆ ಮತ್ತು ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಶನಿವಾರ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ವಿವಿಧ ಇಂಧನ ಮೂಲಗಳು, ಸಮರ್ಪಕ ನೀತಿಗಳು ಮತ್ತು ಸಮರ್ಥವಾದ ರಾಜತಾಂತ್ರಿಕ ಸಂಬಂಧಗಳ ಮೂಲಕ ಭಾರತ ಈ ಬಿಕ್ಕಟ್ಟನ್ನು ಎದುರಿಸಲು ಸಾಧ್ಯವಾಯಿತು. ಆದರಿಂದಾಗಿ ದೇಶದ ಪ್ರಜೆಗಳ ಮೇಲೆ ಅಲ್ಪ ಪ್ರಮಾಣದ ಹೊರೆಯಷ್ಟೇ ಬೀಳುವಂತಾಯಿತು ಎಂದು ತಿಳಿಸಿದರು.

ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಸಂದರ್ಭದಲ್ಲಿ ಭಾರತ ತನ್ನ ಇಂಧನ ಆಮದುಗಳನ್ನು ಗಮನಾರ್ಹವಾಗಿ ವಿಸ್ತರಿಸಿದೆ. ಬಿಕ್ಕಟ್ಟು ಆರಂಭವಾದಾಗ 25 ರಿಂದ 26 ದೇಶಗಳಿಂದ ಇಂಧನ ಆಮದು ಮಾಡಿಕೊಳ್ಳಲಾಗುತ್ತಿತ್ತು. ಬಿಕ್ಕಟ್ಟಿನ ಸಮಯದಲ್ಲಿ ಅದನ್ನು 40ಕ್ಕೂ ಹೆಚ್ಚು ದೇಶಗಳಿಗೆ ವಿಸ್ತರಿಸಿದ್ದೇವೆ. ಅದಕ್ಕೆ ಭಾರತದ ರಾಜತಾಂತ್ರಿಕತೆಯೇ ಕಾರಣ ಎಂದು ಅವರು ಒತ್ತಿ ಹೇಳಿದರು.

ಜಾಗತಿಕ ತೈಲ ಬೆಲೆ ಹೆಚ್ಚಳದಿಂದಾಗಿ ದೇಶದ ತೈಲ ಕಂಪನಿಗಳು ಏಪ್ರಿಲ್ ಮತ್ತು ಜೂನ್ ನಡುವಿನ ಅವಧಿಯಲ್ಲಿ 75,000 ಕೋಟಿಗಿಂತ ಹೆಚ್ಚು ನಷ್ಟ ಅನುಭವಿಸಿದವು. ಸರ್ಕಾರ ಆ ಹೊರೆಯನ್ನು ತನ್ನದಾಗಿಸಿಕೊಂಡಿತು. ಈ ವೇಳೆ ಪ್ರತಿ ಲೀಟರ್‌ಗೆ 10ರಷ್ಟು ಅಬಕಾರಿ ಸುಂಕ ಕಡಿಮೆ ಮಾಡುವುದರ ಮೂಲಕ ನಾಗರಿಕರ ಮೇಲೆ ಹೆಚ್ಚಿನ ಹೊರೆ ಆಗದಂತೆ ನೋಡಿಕೊಳ್ಳಲಾಯಿತು ಎಂದು ವಿವರಿಸಿದರು.

ಈ ವೇಳೆ ಕೆಲ ವರು ಇಲ್ಲಸಲ್ಲದ ವದಂತಿಗಳನ್ನು ಹಬ್ಬಿಸಿ, ಜನರನ್ನು ಪ್ರಚೋದಿಸಲು ಯತ್ನಿಸಿದರು. ದುರದ್ದೇಶ ಹೊಂದಿದ್ದವರ ಯೋಜನೆಗಳು ಯಶಸ್ವಿಯಾಗಲಿಲ್ಲ. ಭಾರತ ವಿಫಲವಾಗುವುದನ್ನು ನೋಡಲು ಬಯಸಿದವರು ಹತಾಶೆಗೆ ಒಳಗಾದರು ಎಂದು ಮೋದಿ ಆರೋಪಿಸಿದರು.

ದೇಶದ ಇಂಧನ ಭದ್ರತೆ ಬಲಪಡಿಸಲು ಪೆಟ್ರೋಕೆಮಿಕಲ್ ಸ್ವಾವಲಂಬನೆ ಹೆಚ್ಚಿಸಲು ಇದು ನೆರವಾಗಲಿದೆ. ಕೈಗಾರಿಕಾ ಕ್ಷೇತ್ರದ ಬೆಳವಣಿಗೆಗೆ ಮತ್ತು ಗಮನಾರ್ಹ ಉದ್ಯೋಗಾವಕಾಶಗಳ ಸೃಷ್ಟಿಗೂ ಕಾರಣವಾಗಲಿದೆ. ರಾಜಸ್ಥಾನದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ 2018ರಿಂದ 2023 ರವರೆಗೆ ಸಂಸ್ಕರಣಾಗಾರದ ಕೆಲಸ ಸ್ಥಗಿತಗೊಂಡಿತ್ತು. ರಾಜ್ಯಪಾಲ ಹರಿಭಾವು ಬಗಾಡೆ, ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರದೀಪ್ ಸಿಂಗ್, ಪುರಿ ಮುಖ್ಯಮಂತ್ರಿ ಭಜನ್ ಲಾಲ್ ಶರ್ಮ ಉಪಸ್ಥಿತರಿದ್ದರು.

ನಾಲ್ಕನೇ ಅತಿದೊಡ್ಡ ದೇಶ

ತೈಲ ಸಂಸ್ಕರಣಾ ಸಾಮರ್ಥ್ಯದಲ್ಲಿ ಭಾರತವು ವಿಶ್ವದ ನಾಲ್ಕನೇ ಅತಿದೊಡ್ಡ ರಾಷ್ಟ್ರವಾಗಿದೆ. ರಸ ಗೊಬ್ಬರ ಪೂರೈಕೆಯಲ್ಲಿ ಉಂಟಾದ ಅಡೆತಡೆಗಳನ್ನು ನಿವಾರಿಸುವಲ್ಲಿ ದೀರ್ಘಾಕಾಲೀನ ನೀತಿಗಳಿಗೆ ಸರ್ಕಾರ ಮನ್ನಣೆ ನೀಡಿದೆ. ಪ್ರಜೆಗಳು ಸ್ವಾವಲಂಬಿಗಳಾದಾಗ ದೇಶವೂ ಸ್ವಾವಲಂಬಿಯಾಗುತ್ತದೆ, ಈ ನಿಟ್ಟಿನಲ್ಲಿ ಸರ್ಕಾರ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿದೆಂದು ಪ್ರಧಾನಿ ತಿಳಿಸಿದರು.

ದೇಶಕ್ಕೆ ಮಹತ್ವದ ಹೆಗ್ಗುರುತು

ಮೋದಿ ಬಣ್ಣನೆ ಪಚಪದ್ರಾದಲ್ಲಿ ದೇಶದ ಮೊದಲ ಗ್ರೀನ್‌ಫೀಲ್ಡ್ ಸಂಯೋಜಿತ ಸಂಸ್ಕರಣಾಗಾರ ಕಂ ಪೆಟ್ರೋಕೆಮಿಕಲ್ ಸಂಕೀರ್ಣವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ದೇಶಕ್ಕೆ ಅರ್ಪಿಸಿದರು. ಸಂಕೀರ್ಣವನ್ನು ವೀಕ್ಷಿಸಿದ ಅವರು ರಿಮೋಟ್ ಬಟನ್ ಒತ್ತುವ ಮೂಲಕ ಯೋಜನೆ ಉದ್ಘಾಟಿಸಿದರು. ದೇಶದ ಇಂಧನ ಮತ್ತು ಪೆಟ್ರೋಕೆಮಿಕಲ್ ವಲಯಕ್ಕೆ ಇದು ಮಹತ್ವದ ಹೆಗ್ಗುರುತಾಗಿದೆ ಎಂದು ಪ್ರಧಾನಿ ಬಣ್ಣಿಸಿದರು.

ರಾಜ್ಯದಲ್ಲಿ ಎಸ್‌ಐಆರ್ ಜಟಾಪಟಿ

» ಮೊದಲನೇ ಪುಟದಿಂದ

ಪಾರದರ್ಶಕವಾಗಿ ಎಸ್‌ಐಆರ್ ಪ್ರಕ್ರಿಯೆಯನ್ನು ನಡೆಸುವಂತೆ ಮನವಿ ಮಾಡಲಾಗುವುದು. ಪ್ರತಿನಿತ್ಯ ಹೇಳಿಕೆ ನೀಡುತ್ತಿದ್ದ ಕೆಪಿಸಿಸಿ ಅಧ್ಯಕ್ಷರು, ಗೃಹ ಸಚಿವರು ಕಲ್ಯಾಣ ಮಂಟಪಗಳಲ್ಲಿ ಎಸ್‌ಐಆರ್‌ಗೆ ಸಂಬಂಧಿಸಿದ ಗಣತಿ ನಮೂನೆಗಳನ್ನು ವಿತರಿಸುತ್ತಿರುವ ಬಗ್ಗೆ ಏನು ಹೇಳುತ್ತಾರೆ. ಸರ್ಕಾರಿ ಅಧಿಕಾರಿಗಳು ಎಸ್‌ಐಆರ್ ಪ್ರಕ್ರಿಯೆಯಲ್ಲಿ ಭಾಗಿಯಾಗಿದ್ದು, ಆಯೋಗದ ಮಾರ್ಗ ಸೂಚಿಯನ್ನು ಪಾಲಿಸುತ್ತಿಲ್ಲ. ಹಾದಿಬೀದಿಯಲ್ಲಿ ಎಸ್‌ಐಆರ್ ಪ್ರಕ್ರಿಯೆ ನಡೆಸಲಾಗುತ್ತಿದೆ ಎಂದು ಆರೋಪಿಸಿದ ಅವರು, ಕೆಪಿಸಿಸಿ ಅಧ್ಯಕ್ಷರು ಹಾಗೂ ಗೃಹಸಚಿವರು ಈಗ ಎಲ್ಲಿ ಹೋಗಿದ್ದಾರೆಂದು ವಾಗ್ದಾಳಿ ನಡೆಸಿದರು.

ಚುನಾವಣಾ ಆಯೋಗಕ್ಕೆ ದೂರು

ಆಡಳಿತಾರೂಢ ಕಾಂಗ್ರೆಸ್, ಅಧಿಕಾರಿಗಳ ಮೇಲೆ ಒತ್ತಡ ಹೇರುತ್ತಿದೆ ಮತ್ತು ಬೂತ್ ಮಟ್ಟದ ಅಧಿಕಾರಿಗಳನ್ನು (ಬಿಎಲ್‌ಒ) ದುರುಪಯೋಗಪಡಿಸಿಕೊಳ್ಳುತ್ತಿದೆ ಎಂದು ಆರೋಪಿಸಿ ಬಿಜೆಪಿ ರಾಜ್ಯ ಚುನಾವಣಾ ಆಯೋಗಕ್ಕೆ ದೂರು ನೀಡಿದೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಶನಿವಾರ ಮಾಜಿ ಸಚಿವ ಎಸ್.ಸುರೇಶ್ ಕುಮಾರ್ ಅವರೊಂದಿಗೆ ಮುಖ್ಯ ಚುನಾವಣಾ ಅಧಿಕಾರಿಯನ್ನು ಭೇಟಿ ಮಾಡಿ ಪಕ್ಷದ ಪರವಾಗಿ ದೂರು ಸಲ್ಲಿಸಿದ್ದಾರೆ.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ವಿಜಯೇಂದ್ರ, ಕೇಂದ್ರ ಚುನಾವಣಾ ಆಯೋಗವು ನಮ್ಮ ರಾಜ್ಯದಲ್ಲಿ ಮತದಾರರ ಪಟ್ಟಿಯ ಪರಿಷ್ಕರಣೆಯನ್ನು ಉತ್ತಮ ಉದ್ದೇಶದಿಂದ ಪ್ರಾರಂಭಿಸಿದೆ. ರಾಜ್ಯ ಸರ್ಕಾರ ಈ ಪ್ರಕ್ರಿಯೆಯನ್ನು ವಿಫಲಗೊಳಿಸಲು ಪ್ರಯತ್ನಿಸುತ್ತಿದೆ. ಬೂತ್ ಮಟ್ಟದ ಅಧಿಕಾರಿಗಳ (ಬಿಎಲ್‌ಒ) ಮೇಲೆ ಒತ್ತಡ ಹೇರಲಾಗುತ್ತಿದೆ ಮತ್ತು ಅವರನ್ನು ದುರುಪಯೋಗಪಡಿಸಿಕೊಳ್ಳಲಾಗುತ್ತಿದೆ. ಎಸ್‌ಐಆರ್ ಪ್ರಕ್ರಿಯೆಯಡಿಯಲ್ಲಿ, ಅಧಿಕಾರಿಗಳು ಮನೆ ಮನೆಗೆ ಹೋಗಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕೆಂದು ಹೇಳಿದರು.

5 ವರ್ಷಗಳಲ್ಲೇ ಈ ಬಾರಿ ಕನಿಷ್ಠ ಮಳೆ: ಆರಂಭದಲ್ಲೇ ಹಿನ್ನಡೆ

» ಮೊದಲನೇ ಪುಟದಿಂದ

ಮಾತ್ರ ವಾಡಿಕೆಗಿಂತ ಹೆಚ್ಚು ಮಳೆ ಆಗಿದೆ. ಅರಸೀಕೆರೆಯಲ್ಲಿ ಶೇ.2 ಮತ್ತು ಚನ್ನರಾಯಪಟ್ಟಣದಲ್ಲಿ ಶೇ.12ರಷ್ಟು ಅಧಿಕ ಮಳೆಯಾಗಿದೆ.

ಆರಂಭದಲ್ಲೇ ಮಳೆ ಕೊರತೆ ಉಂಟಾಗಿರುವುದರಿಂದ ಜಿಲ್ಲೆಯ ಪ್ರಮುಖ ಜಲಾಶಯಗಳ ಒಳಹರಿವು, ಕೆರೆಗಳ ನೀರಿನ ಸಂಗ್ರಹ ಹಾಗು ಅಂತರ್ಜಲ ಮಟ್ಟದ ಮೇಲೂ ಹೊಡೆತ ಬಿದ್ದಿದೆ. ಮಳೆ ಕೊರತೆ ಇದೇ ರೀತಿ ಮುಂದುವರಿದರೆ ಮುಂದಿನ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯೂ ಎದುರಾಗುವ ಆತಂಕ ವ್ಯಕ್ತವಾಗುತ್ತಿದೆ.

ಮಲೆನಾಡಿನಲ್ಲೂ ನಿರಾಸೆ

ಸಾಮಾನ್ಯವಾಗಿ ಜೂನ್ ತಿಂಗಳಲ್ಲೇ ಮಲೆನಾಡು ಭಾಗದಲ್ಲಿ ಉತ್ತಮ ಮಳೆಯಾಗುತ್ತದೆ. ಈ ಬಾರಿ ಸಕಲೇಶಪುರ, ಆಲೂರು ಮತ್ತು ಬೇಲೂರು ಭಾಗಗಳಲ್ಲೂ ನಿರೀಕ್ಷಿತ ಪ್ರಮಾಣದ ಮಳೆಯಾಗಿಲ್ಲ. ಆದರಿಂದ ಭತ್ತ ಸೇರಿ ಮಳೆ ಆಧಾರಿತ ಬೆಳೆಗಳ ಬಿತ್ತನೆಗೆ ವ್ಯತ್ಯಯ ಉಂಟಾಗಿದೆ. ಕೃಷಿ ಚಟುವಟಿಕೆಗೆ ಜುಲೈ ತಿಂಗಳ ಮಳೆ ನಿರ್ಣಾಯಕವಾಗಿದ್ದು, ಮುಂದಿನ ಕೆಲ ವಾರಗಳಲ್ಲಿ ಉತ್ತಮ ಮಳೆಯಾದರೆ ಮಾತ್ರ ಪರಿಸ್ಥಿತಿ ಸುಧಾರಿಸುವ ನಿರೀಕ್ಷೆಯಿದೆ. ಇಲ್ಲದಿದ್ದರೆ ಬಿತ್ತನೆ ಮತ್ತಷ್ಟು ವಿಳಂಬವಾಗುವ ಜೊತೆಗೆ ಉತ್ಪಾದನೆ ಮೇಲೂ ಪರಿಣಾಮ ಬೀರಬಹುದೆಂದು ಕೃಷಿ ವಲಯದ ಮೂಲಗಳು ತಿಳಿಸಿವೆ.

ಪೌರಕಾರ್ಮಿಕರಿಗೆ ನಿವೇಶನ, ಸೌಕರ್ಯಕ್ಕೆ ಆದ್ಯತೆ ನೀಡಿ

» ಮೊದಲನೇ ಪುಟದಿಂದ

ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಉಪ ವಿಭಾಗಾಧಿಕಾರಿಗೆ ನಿರ್ದೇಶನ ನೀಡಿದರು.

ಆರೋಗ್ಯ ತಪಾಸಣೆ ಕಡ್ಡಾಯ

ಸಫಾಯಿ ಕರ್ಮಚಾರಿಗಳ ಆಯೋಗದ ಕಾರ್ಯದರ್ಶಿ ಸುನಾಯ ಅವರು ಮಾತನಾಡಿ, ಹಾಸನ, ಸಕಲೇಶಪುರ ಹಾಗು ಚನ್ನರಾಯಪಟ್ಟಣದ ಪೌರಕಾರ್ಮಿಕರ ಸಮಸ್ಯೆಗಳ ಕುರಿತು ಸಾಮಾಜಿಕ ಜಾಲತಾಣಗಳ ಮೂಲಕ ದೂರುಗಳು ಬಂದಿದ್ದು, ಅವುಗಳ ಪರಿಹಾರಕ್ಕೆ ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಪ್ರತಿ ಮೂರು ತಿಂಗಳಿಗೊಮ್ಮೆ ಆರೋಗ್ಯ ತಪಾಸಣೆ ಹಾಗೂ ವರ್ಷಕ್ಕೊಮ್ಮೆ ಮಾಸ್ಟರ್ ಹೆಲ್ತ್ ಚೆಕ್‌ಅಪ್ ನಡೆಸಬೇಕು. ಇಎಸ್‌ಐ, ಪಿಎಫ್, ಸಂಕಷ್ಟ ಭತ್ಯೆ ಸೇರಿ ಸರ್ಕಾರಿ ಸೌಲಭ್ಯಗಳ ಬಗ್ಗೆ ಕಾರ್ಮಿಕರಲ್ಲಿ ಅರಿವು ಮೂಡಿಸುವ ಅಗತ್ಯವಿದೆ ಎಂದು ಹೇಳಿದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶುಭಂ ಶುಕ್ಲ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿಧಿ ಸೇರಿ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಹಳೆ ದಿನಪತ್ರಿಕೆಗಳಿಗೆ ದರಪಟ್ಟಿ ಆಹ್ವಾನ

• ಪ್ರಜೋದಯ ವರದಿ

ಹಾಸನ: ನಗರದ ಕೇಂದ್ರ ಗ್ರಂಥಾಲಯ ಮತ್ತು ಶಾಖಾ ಗ್ರಂಥಾಲಯಗಳಲ್ಲಿ 2025-26 ನೇ ಸಾಲಿನ ಅಂತ್ಯಕ್ಕೆ (ದಿನಾಂಕ:-01-04-2025 ರಿಂದ ದಿನಾಂಕ-31-03-2026ರವರೆಗೆ) ಸಂಗ್ರಹವಾಗಿರುವ ಹಳೇದಿನಪತ್ರಿಕೆಗಳು/ನಿಯತಕಾಲಿಕೆಗಳನ್ನು ವಿಲೇವಾರಿ ಮಾಡಲು ದರಪಟ್ಟಿಗಳನ್ನು ಆಹ್ವಾನಿಸಲಾಗಿರುತ್ತದೆ ಎಂದು ನಗರ ಕೇಂದ್ರ ಗ್ರಂಥಾಲಯದ ಉಪ ನಿರ್ದೇಶಕರು ತಿಳಿಸಿದ್ದಾರೆ.

ಹಳೇ ದಿನಪತ್ರಿಕೆ/ಪುಸ್ತಕಗಳನ್ನು ಕೊಂಡುಕೊಳ್ಳುವ ವ್ಯಾಪಾರಿಗಳು ಭದ್ರತಾ ಠೇವಣಿಯಾಗಿ (ಇ.ಎಂ.ಡಿ) ಮೊತ್ತ ರೂ-1000 (ಒಂದು ಸಾವಿರ ರೂಪಾಯಿಗಳು ಮಾತ್ರ) ಪಾವತಿಸಿ ರಶೀದಿಯನ್ನು ಪಡೆದು ಈ ಕಚೇರಿಯಲ್ಲಿ ಲಭ್ಯವಿರುವ ನಿಗಧಿತ ನಮೂನೆಯಲ್ಲಿ ಮಾಹಿತಿಯನ್ನು ಭರ್ತಿ ಮಾಡಿ ಜು.17 ರಂದು ಸಂಜೆ 4 ಗಂಟೆಯೊಳಗೆ ಈ ಕಚೇರಿಗೆ ಸಲ್ಲಿಸಲು ತಿಳಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರ ಕಚೇರಿ, ನಗರ ಕೇಂದ್ರ ಗ್ರಂಥಾಲಯ, ಮಹಾವೀರ ವೃತ್ತ, ಹಾಸನ ಇಲ್ಲಿ ಕಚೇರಿ ವೇಳೆಯಲ್ಲಿ (ಬೆಳ್ಳಗ್ಗೆ 10 ರಿಂದ ಸಂಜೆ 5.30 ರವರೆಗೆ) ಸಂಪರ್ಕಿಸ ಬಹುದಾಗಿದೆ.

ಪೋಷಕತ್ವ ಯೋಜನೆಗೆ ಅರ್ಜಿ ಆಹ್ವಾನ

ಹಾಸನ: ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ನಾನಾ ರೀತಿಯ ಸಂಕಷ್ಟಕ್ಕೆ ಒಳಗಾಗಿ ದಾಖಲಾಗಿರುವ 6 ರಿಂದ 18 ವರ್ಷದೊಳಗಿನ ಮಕ್ಕಳನ್ನು ಪೋಷಕತ್ವ ಯೋಜನೆಯಡಿ ಪಾಲನೆ ಹಾಗೂ ಪೋಷಣೆಗಾಗಿ ಆಸಕ್ತಿಯಿರುವ ಪೋಷಕರಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ಪೋಷಕರು ಜಿಲ್ಲೆಯ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಸಂಜಿಗೆ ರಸ್ತೆ, ಮಸೀದಿ ಹತ್ತಿರ, ಕೆ.ಆರ್ ಪುರಂ ಅಥವಾ ದೂರವಾಣಿ ಸಂಖ್ಯೆ:08172-231360 ಗೆ ಸಂಪರ್ಕಿಸಿ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ತಿಳಿಸಿದ್ದಾರೆ.

ಅಗ್ನಿ ಅವಘಡ ತಡೆಗೆ ಅಣಕು ಪ್ರದರ್ಶನ

ಎಸ್‌ಡಿಎಂ ಕಾಲೇಜು ಆವರಣದಲ್ಲಿ ಅಗ್ನಿಶಾಮಕ ದಳದಿಂದ ಜಾಗೃತಿ

• ಪ್ರಜೋದಯ ವರದಿ

ಹಾಸನ: ನಗರದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಕೃತಕ ಅಗ್ನಿ ಅವಘಡ ಸೃಷ್ಟಿಸಿ, ಸುರಕ್ಷತಾ ಕ್ರಮಗಳ ಬಗ್ಗೆ ಅಣಕು ಪ್ರದರ್ಶನ ನಡೆಸಲಾಯಿತು.

ಜಿಲ್ಲಾ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ ಸಹಯೋಗದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವೈದ್ಯಕೀಯ ಹಾಗು ಅರೆ ವೈದ್ಯಕೀಯ ಸಿಬ್ಬಂದಿ ಒಳಗೊಂಡಂತೆ ಟ್ರಾನ್ಸ್‌ಪೋರ್ಟೇಶನ್, ಪ್ರಥಮ ಚಿಕಿತ್ಸೆ, ಅಗ್ನಿಶಾಮಕ, ಸೈಟ್‌ಸೀನ್, ಎವಾಕ್ಯುವೇಷನ್ ಹಾಗು ಮೀಡಿಯಾ ಮ್ಯಾನೇಜ್‌ಮೆಂಟ್ ಸೇರಿ ಆರು ತಂಡಗಳನ್ನು ರಚಿಸಿ ಕಾರ್ಯಾಚರಣೆ ನಡೆಸಲಾಯಿತು. ಅಣಕು ಪ್ರದರ್ಶನದಲ್ಲಿ ಅಗ್ನಿ ಅನಾಹುತ ಸಂಭವಿಸಿದ ಸಂದರ್ಭದಲ್ಲಿ ಸಿಬ್ಬಂದಿ ಹಾಗು ವಿದ್ಯಾರ್ಥಿಗಳು ತುರ್ತು ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸುವ ಬಗ್ಗೆ ಮಾಹಿತಿ ನೀಡಲಾಯಿತು. ಕಟ್ಟಡದಲ್ಲಿದ್ದ ಎಲ್ಲಾ ಲಿಫ್ಟ್‌ಗಳನ್ನು ಸ್ಥಗಿತಗೊಳಿಸಿ ಮೆಟ್ಟಿಲುಗಳ ಮೂಲಕ ಸುರಕ್ಷಿತವಾಗಿ ಹೊರಕ್ಕೆ ಸ್ಥಳಾಂತರಿಸಲಾಯಿತು.

ಕಾರ್ಯಾಚರಣೆ ವೇಳೆ ವಿವಿಧ ರೀತಿಯ ಗಾಯಾಳುಗಳನ್ನು ಸೃಷ್ಟಿಸಿ ಅವರಿಗೆ ಪ್ರಥಮ ಚಿಕಿತ್ಸೆ, ಬೇಸಿಕ್ ಲೈಫ್ ಸಪೋರ್ಟ್, ಆ್ಯಂಬುಲೆನ್ಸ್ ಹಾಗು ವ್ಹೀಲ್ ಚೇರ್ ಮೂಲಕ ತುರ್ತು ಚಿಕಿತ್ಸಾ ವಿಭಾಗಕ್ಕೆ ಸಾಗಿಸುವ ಪ್ರಕ್ರಿಯೆ ಪ್ರದರ್ಶಿಸಲಾಯಿತು. ಸುರಕ್ಷಿತ ಸಮಾವೇಶ ಸ್ಥಳಕ್ಕೆ ಜನರನ್ನು ಸ್ಥಳಾಂತರಿಸುವ ಕ್ರಮವನ್ನೂ ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಯಿತು.

ಅಗ್ನಿಶಾಮಕ ತಂಡವು ಎಬಿಸಿ ಹಾಗು ಕಾರ್ಬನ್ ಡೈಆಕ್ಸೈಡ್ ಅಗ್ನಿಶಾಮಕ ಉಪಕರಣಗಳು ಮತ್ತು ಹೈಡ್ರಂಟ್ ವ್ಯವಸ್ಥೆಯನ್ನು ಬಳಸಿ ಬೆಂಕಿ ನಿಯಂತ್ರಿಸುವ ವಿಧಾನ ಪ್ರದರ್ಶಿಸಿತು. ಮೀಡಿಯಾ ಮ್ಯಾನೇಜ್ಮೆಂಟ್ ತಂಡವು ಘಟನೆಯ ವರದಿ ಸಿದ್ಧಪಡಿಸಿ ತುರ್ತು ಪರಿಸ್ಥಿತಿಯಲ್ಲಿ ಮಾಹಿತಿ ನಿರ್ವಹಣೆಯ ಮಹತ್ವ ವಿವರಿಸಿತು.

ಈ ಕಾರ್ಯದಲ್ಲಿ 750ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಸಂಸ್ಥೆಯ ನಿರ್ದೇಶಕ ಡಾ.ಪ್ರಸನ್ನ ನರಸಿಂಹ ರಾವ್, ಪ್ರಾಂಶುಪಾಲೆ ಡಾ. ಶೈಲಜಾ ಉಪ್ಪಿನಕುದುರು, ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ಮುರಳೀಧರ ಪಿ.ಪೂಜಾರ್, ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಕೆ.ಪಿ. ನವೀನ್ ಅವರ ಮಾರ್ಗದರ್ಶನದಲ್ಲಿ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿತು.

ಪ್ರವಾಸಿಗರು ಸ್ವಚ್ಛತೆಯ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ

• ಪ್ರಜೋದಯ ವರದಿ

ಹಾಸನ: ಸಾರ್ವಜನಿಕರು ಹಾಗೂ ಪ್ರವಾಸಿಗರು ಸಹ ಸ್ವಚ್ಛತೆಯ ಬಗ್ಗೆ ಹೆಚ್ಚಿನ ಕಾಳಜಿವಹಿಸಬೇಕು ಹಾಗೂ ಪ್ರವಾಸಿಗರು ಪ್ಲಾಸ್ಟಿಕ್ ಹಾಗೂ ಆಹಾರ ತ್ಯಾಜ್ಯಗಳನ್ನು ಎಲ್ಲೆಂದರಲ್ಲಿ ಬಿಸಾಡದೆ ನಿಗದಿತ ಸ್ಥಳಗಳಲ್ಲಿಯೇ ವಿಲೇವಾರಿ ಮಾಡುವ ಮೂಲಕ ಪ್ರವಾಸಿ ತಾಣದ ಸ್ವಚ್ಛತೆ ಮತ್ತು ಪರಿಸರ ಸಂರಕ್ಷಣೆಗೆ ಸಹಕರಿಸಬೇಕು ಎಂದು ಪ್ರವಾಸೋದ್ಯಮ ಇಲಾಖೆಯ ಅಧಿಕಾರಿಗಳು ಮಾಹಿತಿ ನೀಡಿದರು.

ಹಾಸನ ಜಿಲ್ಲೆಯ ಪ್ರಸಿದ್ಧ ಪ್ರವಾಸಿ ತಾಣಗಳಲ್ಲಿ ಒಂದಾದ ಶೆಟ್ಟಿಹಳ್ಳಿ ಚರ್ಚ್ ಆವರಣದಲ್ಲಿಂದು ಪ್ರವಾಸೋದ್ಯಮ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳು ಮತ್ತು ಗ್ರಾಮ ಪಂಚಾಯಿತಿ ಸಿಬ್ಬಂದಿಗಳ ಸಹಯೋಗದೊಂದಿಗೆ ಸುತ್ತಮುತ್ತಲಿನ ಪ್ರದೇಶದಲ್ಲಿ ಪ್ರವಾಸಿಗರು ಬಿಸಾಡಿದ್ದ ತಿಂಡಿ-ತಿನಿಸುಗಳ ತ್ಯಾಜ್ಯ ವಸ್ತುಗಳು, ಪ್ಲಾಸ್ಟಿಕ್ ಕವರ್‌ಗಳು, ನೀರಿನ ಖಾಲಿ ಬಾಟಲಿಗಳು ಹಾಗೂ ಇತರೆ ತ್ಯಾಜ್ಯ ವಸ್ತುಗಳನ್ನು ತೆರವುಗೊಳಿಸುವ ಉದ್ದೇಶದಿಂದ ಸ್ವಚ್ಛತಾ ಕಾರ್ಯವನ್ನು ಕೈಗೊಳ್ಳಲಾಯಿತು.

ಪ್ರವಾಸಿ ತಾಣ ಪರಿಸರದ ಸ್ವಚ್ಛತ